ದುರಭಿಮಾನವಿದೆ ಎಂದು ಇದರಿಂದ ಗೊತ್ತಾಗುತ್ತದೆ. ನಿಮ್ಮ ಸಮ್ಮಿಶ್ರ ಸರ್ಕಾರದ ಎರಡೂ ಪಕ್ಷದವರು ಸೇರಿ ಕನಿಷ್ಟ ಒಬ್ಬ ಮಹಿಳೆಗೂ ಅವಕಾಶ ಕೊಟ್ಟಿಲ್ಲ. ಇದು ಇಡೀ ರಾಜ್ಯದ ಮಹಿಳೆಯರಿಗೆ ಮಾಡಿದಂಥ ಅಗೌರವ, ಅಪಮಾನ. ಇದು ಆಗತಕ್ಕಂಥಾದ್ದು ಅಲ್ಲ, ಇದು ಒಳ್ಳೆಯದಲ್ಲ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ನಿಮ್ಮ ರೆಕಮೆಂಡೇಷನ್ ಮೇಲೆಯೇ ಕೊಡಲಿಲ್ಲ ಅಂತ.

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಮಾಡುವುದು ಒಳ್ಳೆಯದಲ್ಲ. ಕನಿಷ್ಟ ಒಬ್ಬ ಮಹಿಳೆಗೂ ಕೊಟ್ಟಿಲ್ಲ. ಇದು ಮಹಿಳೆಯರಿಗೆ ಇವರು ತೋರಿಸತಕ್ಕಂಥ ಗೌರವ. ಮಾನ್ಯ ಯಡಿಯೂರಪ್ಪನವರೇ, ಮಹಿಳಾ ವರ್ಷದಲ್ಲಿ ಮಹಿಳೆಯರಿಗೆ ಈ ರೀತಿ ಮಾಡಿರುವುದು ಸರಿಯೇ? ಇದು ನಿಮ್ಮ ನೀತಿಯೇ? ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ಅವರಿಗೆ ತೆನೆ ಹೊರುವುದಕ್ಕೆ ಮಾತ್ರ ಮಹಿಳೆ ಬೇಕು. ತೆನೆ ಹೊತ್ತ ಮಹಿಳೆ, ತೆನೆ ಹೊರುವುದಕ್ಕೆ ಮಾತ್ರ ಇರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂಥ ವಾಟಾಳ್ ನಾಗರಾಜ್‌ರವರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದಕ್ಕೆ ಇನ್ನೂ ಅವಕಾಶಗಳಿವೆ. ಮುಂದಿನ ದಿನಗಳಲ್ಲಿ ಇನ್ನೂ ಮಂತ್ರಿಮಂಡಲದ ವಿಸ್ತರಣೆ ಇದೆ. ಆ ಸಂದರ್ಭದಲ್ಲಿ ವಾಟಾಳ್ ನಾಗರಾಜ್‌ರವರ ಸಲಹೆಯನ್ನೂ ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಅವರು ಮಹಿಳೆಯರ ಬಗ್ಗೆ ಹೇಳಿದರು, ಸರ್ಕಾರದ ಕಾರ್ಯದರ್ಶಿಗಳ ಮಟ್ಟದಲ್ಲಿ ಪ್ರಮುಖ ಇಲಾಖೆಗಳನ್ನು ಮಹಿಳೆಯರಿಗೆ ಕೊಟ್ಟು, ಮಹಿಳೆಯರಿಗೆ ನಾವು ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ ಎಂದು ಹೇಳಲು ಬಯಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ : ತೆನೆ ಹೊತ್ತುಕೊಂಡಿರುವ ಮಹಿಳೆಯನ್ನು ಮಾತ್ರ ಇಟ್ಟುಕೊಂಡಿದ್ದೀರಿ ಅಷ್ಟೇ ನೀವು.

6. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ: ಬಿಎಂಐಸಿ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಾನು ಕಳೆದ ಎರಡು ದಿವಸಗಳಿಂದ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆ, ಇವತ್ತೂ

ಕೂಡ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ನಿಲುವಳಿ ಸೂಚನೆ ಇದ್ದಾಗ ಬೇರೆ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬಾರದು ಎನ್ನುವುದು ನಮ್ಮ ಸದನದ ಸಂಪ್ರದಾಯ ಮತ್ತು ನಿಯಮಗಳೂ ಇವೆ. ಆ ರೀತಿ ಮಾಡುವುದನ್ನು ಬಿಟ್ಟು ಬೇರೆಯದನ್ನು ತೆಗೆದುಕೊಳ್ಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ, ನಿಮಗೆ ಆ ಅಧಿಕಾರವಿದೆ. ಅದನ್ನು ಬದಲಾವಣೆ ಮಾಡಿ, ತಿದ್ದುಪಡಿ ಮಾಡಿ ಇನ್ನೊಂದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ನಿಮಗೆ ಇರುವ ಅಧಿಕಾರವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಮುಂದೊಂದು ದಿವಸ ಇದು ಕೆಟ್ಟ ಸಂಪ್ರದಾಯವಾಗುತ್ತದೆ. ನಾಳೆ ನಿಮ್ಮನ್ನೇ ಪ್ರಶ್ನೆ ಮಾಡುತ್ತಾರೆ, ಮುಂದೆ ಯಾರಾದರೂ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದಾಗ, ಬೇರೆ ವಿಚಾರಗಳಿಗೆ, ಬೇರೆ ಕಾರ್ಯಕಲಾಪಗಳಿಗೆ ನೀವು ಅನುಮತಿ ಕೊಟ್ಟರೆ, ನಾಳೆ ನಿಮ್ಮನ್ನೇ ಪ್ರಶ್ನೆ ಮಾಡುತ್ತಾರೆ ಎನ್ನುವುದನ್ನೂ ಕೂಡ ನೀವು ದಯವಿಟ್ಟು ಗಮನದಲ್ಲಿಟ್ಟು ಕೊಳ್ಳಬೇಕು. ನಿಲುವಳಿ ಸೂಚನೆ ಕೊಟ್ಟಂಥ ಹಲವಾರು ಸಂದರ್ಭಗಳಲ್ಲಿ ಬೇರೆ ಯಾವುದೇ ಕಾರ್ಯಕಲಾಪಕ್ಕೆ ಅವಕಾಶ ನೀಡದೇ, ಪ್ರಶ್ನೋತ್ತರ ವೇಳೆಯನ್ನೂ ಸಹ ನೀವು ರದ್ದು ಮಾಡುತ್ತೀರಿ. ಆದರೆ, ನಾನು ನಿಲುವಳಿ ಸೂಚನೆ ಕೊಟ್ಟಿದ್ದರೂ ಕೂಡ ನೀವು ಬೇರೆ ಕಾರ್ಯಕಲಾಪಗಳಿಗೆ ಅನುಮತಿ ಕೊಟ್ಟಿದ್ದೀರಿ. ಇದೊಂದು ಬ್ಯಾಡ್ ಪ್ರಿಸಿಡೆಂಟ್ ಆಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಈ ಸದನದ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ಅಷ್ಟು ಹೇಳಿ, ನಾನು ನಿಲುವಳಿ ಸೂಚನೆ ಕೊಟ್ಟಿರತಕ್ಕಂಥ ವಿಚಾರ.......

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ಕೆಟ್ಟ ಸಂಪ್ರದಾಯ ವಾಗುವುದಿಲ್ಲ. ಏಕೆಂದರೆ, ಹೌಸ್ ಡಿಸ್‌ಆರ್ಡರ್‌ನಲ್ಲಿ ಇತ್ತು. ಸದಸ್ಯರುಗಳೆಲ್ಲಾ ವೆಲ್‌ನಲ್ಲಿದ್ದರು. ಆ ಕಾರಣದಿಂದ ನಿಮಗೆ ಆಗ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕೆ ಆಗುತ್ತಿರಲಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ನಿಮ್ಮ ಅಧಿಕಾರವನ್ನು ಪ್ರಶ್ನೆ ಮಾಡುತ್ತಿಲ್ಲ.

ಅಧ್ಯಕ್ಷರು : ಸಂಪ್ರದಾಯವೇನೂ ಕೆಟ್ಟ ಸಂಪ್ರದಾಯವಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಯಿತು. ಇವತ್ತು ನಾನು ನಿಲುವಳಿ ಸೂಚನೆ ಕೊಟ್ಟಿರತಕ್ಕಂಥ ವಿಚಾರ, ಇಡೀ ರಾಜ್ಯದಲ್ಲಿ ಬಹಳ ಗಂಭೀರವಾದಂಥ ರಾಜಕೀಯ ಬಿಕ್ಕಟ್ಟನ್ನು ಉಂಟು ಮಾಡಿರತಕ್ಕಂಥ ವಿಚಾರ. ಎಂತಹ ಗಂಭೀರವಾದಂಥ ರಾಜಕೀಯ ಬಿಕ್ಕಟ್ಟು ಉಂಟಾಗಿದೆ ಎಂದರೆ, ಸಚಿವ ಸಂಪುಟದ ಸಭೆಯನ್ನು ನಾಲ್ಕೂವರೆ ಗಂಟೆಗೆ ನಿಗಧಿ ಮಾಡಿ, ಎಂಟೂವರೆ

ಗಂಟೆಯವರೆಗೂ ಮುಖ್ಯಮಂತ್ರಿಗಳು ಸಚಿವ ಸಂಪುಟದ ಸಭೆ ನಡೆಯತಕ್ಕಂಥ ರೂಮಿನಲ್ಲಿದ್ದಾರೆ, ಉಪ ಮುಖ್ಯಮಂತ್ರಿಗಳು ಅವರ ರೂಮಿನಲ್ಲಿದ್ದಾರೆ, ಮಂತ್ರಿಮಂಡಲದ ಸಭೆ ನಡೆಯುತ್ತದೆಯೋ, ನಡೆಯುವುದಿಲ್ಲವೋ ಎನ್ನ ತಕ್ಕಂಥಾದ್ದು ಯಾರಿಗೂ ಗೊತ್ತಿಲ್ಲ; ಕಡೆಗೆ, ಮಂತ್ರಿಮಂಡಲದ ಸಭೆ ನಡೆಯಿತೇ, ಇಲ್ಲವೇ, ಅದರಲ್ಲಿ ಏನಾದರೂ ತೀರ್ಮಾನವನ್ನು ತೆಗೆದುಕೊಂಡರೇ, ಇಲ್ಲವೇ ಎನ್ನತಕ್ಕಂಥಾದ್ದೂ ಕೂಡ ಈ ರಾಜ್ಯದ ಜನತೆಗೆ ಗೊತ್ತಿಲ್ಲ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಎಂದೂ ಕೂಡ ಇಂಥ ಗಂಭೀರವಾದಂಥ ರಾಜಕೀಯ ಪರಿಸ್ಥಿತಿ, ರಾಜಕೀಯ ಬಿಕ್ಕಟ್ಟು ಉಂಟಾಗಿರಲಿಲ್ಲ. ಸಚಿವ ಸಂಪುಟದ ಸಭೆಯನ್ನು ನಾಲ್ಕೂವರೆಗೆ ನಿಗಧಿ ಮಾಡಿ, ಅದನ್ನು ಎಂಟೂವರೆಯವರೆಗೆ ಮುಂದೂಡಿ, ಕಡೆಗೆ ಅನಿಶ್ಚಿತವಾಗಿ, ಯಾವುದೇ ಅಜೆಂಡಾವನ್ನು ಚರ್ಚೆ ಮಾಡದೇ ಆ ಸಚಿವ ಸಂಪುಟದ ಸಭೆಯನ್ನು ಮುಂದೂಡಿರತಕ್ಕಂಥಾದ್ದು ಏನಿದೆ, ಇದು ಈ ಸರ್ಕಾರ ಈ ರಾಜ್ಯದ ನೆಲದ ಕಾನೂನಿಗೆ ಮತ್ತು ಈ ರಾಜ್ಯದ ಜನರ ವಿಶ್ವಾಸಕ್ಕೆ ಮಾಡಿರತಕ್ಕಂಥ ಪರಮದ್ರೋಹ ಎನ್ನುವುದು ನನ್ನ ಅಭಿಪ್ರಾಯ. ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ವಿಷಯದ ಬಗ್ಗೆ ನಾನು ಇವತ್ತು ನಿಲುವಳಿ ಸೂಚನೆಯನ್ನು ಏನು ಕೊಟ್ಟಿದ್ದೇನೆ, ಅದರ ವಿಷಯವಾಗಿ ಕಳೆದ ಒಂದು ತಿಂಗಳಿಂದ ಇಡೀ ರಾಜ್ಯದಲ್ಲಿ ಗಂಭೀರವಾದಂಥ ಚರ್ಚೆ ನಡೆಯುತ್ತಿದೆ. ಒಂದು ಕಡೆ ಅವರು ಸರ್ಕಾರದ ಮೇಲೆ ಸವಾಲು ಹಾಕುತ್ತಿದ್ದಾರೆ, ಇನ್ನೊಂದು ಕಡೆ ಸರ್ಕಾರದವರು ಹೇಳಿಕೆಗಳನ್ನು ಕೊಡುತ್ತಿದ್ದಾರೆ. ದುರಂತವೇನೆಂದರೆ, 5 ಕೋಟಿ ಜನರಿಂದ ಆಯ್ಕೆಯಾಗಿರತಕ್ಕಂಥ ಒಂದು ಸರ್ಕಾರವನ್ನು, 70 ರೂಪಾಯಿ ಬಂಡವಾಳ ಹಾಕಿರತಕ್ಕಂಥ ಒಂದು ಕಂಪನಿಯವರು ಹೆದರಿಸುತ್ತಾರೆ, ಬೆದರಿಸುತ್ತಾರೆ, ಸರ್ಕಾರವನ್ನು ಅವಹೇಳನ ಮಾಡುತ್ತಾನೆ, ಮುಖ್ಯಮಂತ್ರಿಗಳನ್ನು ಕೋರ್ಟಿಗೆ ಎಳೆಯುತ್ತೇನೆ ಎಂದು ಹೇಳುತ್ತಾನೆ ಎಂದು ಹೇಳುವುದರ ಜೊತೆಗೆ ರಾಜಕಾರಣಿಗಳ ಬಗ್ಗೆ ಅವನು ಹಿಗ್ಗಾಮುಗ್ಗಾ ಮಾತನಾಡಿದ್ದಾನೆ. ಒಂದು ಪತ್ರಿಕೆಯಲ್ಲಿ ಎಷ್ಟು ಕೆಟ್ಟದಾಗಿ ಮಾತನಾಡಿದ್ದಾನೆಂದರೆ, ನೈಸ್ ಕಂಪನಿಯ ಆ ಮನುಷ್ಯ ಪತ್ರಿಕೆಗೆ ಒಂದು ಇಂಟರ್‌ವ್ಯೂ ಕೊಟ್ಟಿದ್ದಾನೆ. ಅನು ಯಾರೆಂದರೆ, ಆ ನೈಸ್ ಕಂಪನಿಯ..........

ಶ್ರೀ ಬಸವರಾಜ ರಾಯರೆಡ್ಡಿ : ಒಂದು ನಿಮಿಷ ಯೀಲ್ಡ್ ಆಗಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಯೀಲ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ನಿಮ್ಮ ಪರವಾಗಿಯೇ ಇದನ್ನು ಹೇಳುತ್ತಿರುವುದು.

(ಗೊಂದಲ)

ಶ್ರೀ ಹೆಚ್. ಆಂಜನೇಯ : ಅವರು ಮಾತನಾಡುವುದಕ್ಕೆ ಬಿಡಿ.

(ಗೊಂದಲ)

ಅಧ್ಯಕ್ಷರು : ಆಯಿತು, ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹೇಳುವುದಕ್ಕೆ ನನಗೆ ಅಧಿಕಾರವಿದೆ. ಅದನ್ನು ನೀವು ಒಪ್ಪಿ, ಬಿಡಿ, ಅದು ಬೇರೆ ವಿಚಾರ. ಆದರೆ, ಈ ರಾಜ್ಯದ ರಾಜಕಾರಣಿಗಳನ್ನು ಅವನು ಎಷ್ಟು ಅವಮಾನ ಮಾಡುತ್ತಿದ್ದಾನೆ ಎನ್ನುವುದರ ಬಗ್ಗೆ ನಾನು ಹೇಳುತ್ತಿದ್ದೇನೆ. ನನ್ನ ಪ್ರಿಲಿಮಿನರಿ ಸಬ್ಮಿಷನ್‌ಗೆ ನೀವೇಕೆ ಅಡ್ಡಿ ಬರುತ್ತೀರಿ? ಆತನು ರಾಜಕಾರಣಿಗಳ ಬಗ್ಗೆ ಎಷ್ಟು ಹಗುರವಾಗಿ ಮಾತನಾಡಿದ್ದಾನೆ ಎಂದರೆ, ಅವನು ಒಂದು ಪತ್ರಿಕೆಗೆ ಇಂಟರ್‌ವ್ಯೂ ಕೊಡುತ್ತಾನೆ, ಪತ್ರಿಕೆಗೆ ಅವನು ಇಂಟರ್‌ವ್ಯೂ ಕೊಟ್ಟಾಗ ರಾಜಕಾರಣಿಗಳ ಬಗ್ಗೆ ಆತನಲ್ಲಿರತಕ್ಕಂಥ ಅಭಿಪ್ರಾಯವೇನು ಎಂಬುದು ಗೊತ್ತಾಗುತ್ತದೆ. ಇದರಲ್ಲಿ ಏನಿದೆ ಎಂದು ಹೇಳುತ್ತೇನೆ, ... ಸ್ಪಷ್ಟವಾಗಿ ಉತ್ತರಿಸಲು ಹಿಂಜರಿದ ಅವರು, ಸತ್ಯ ಹೇಳುತ್ತೇನೆ, ಬಿ.ಎಸ್. ಪಾಟೀಲ್ ಆಗಲೀ, ಜಿ.ಕೆ. ಆಗಲೀ ಯಾರೂ ನನ್ನಿಂದ ಹಣ ಪಡೆದಿಲ್ಲ, ಕೇಳಿಯೂ ಇಲ್ಲ. ನನ್ನಿಂದ ಹಣ ಕೇಳಿದ್ದು, ** ಎಂದು ಹೇಳುತ್ತಾನೆ. ಅಂದರೆ, ರಾಜಕಾರಣಿಗಳ ಬಗ್ಗೆ ಆತ ಎಷ್ಟು ಕೆಟ್ಟದಾಗಿ ಮಾತನಾಡಿದ್ದಾನೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಅಂಜನಾಮೂರ್ತಿ : ನ್ಯಾಷನಲ್ ಪೇಪರ್‌ಗಳಲ್ಲಿರುವುದನ್ನೇ ಡಿನೈ ಮಾಡುತ್ತಾರೆ. ಹಾಗಿರುವಾಗ ನೀವು ಯಾವುದೋ ಒಂದು ಪೇಪರ್ ನಲ್ಲಿರುವುದನ್ನು ಹೇಳುತ್ತಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಏನು ಹೇಳುತ್ತಿದ್ದೇನೆ ಎನ್ನುವುದನ್ನು ನೀವು ಅರ್ಥಮಾಡಿಕೊಳ್ಳಿ. ರಾಜಕಾರಣಿಗಳ ಬಗ್ಗೆ ಎಷ್ಟು........

ಶ್ರೀ ಹೆಚ್. ಆಂಜನೇಯ : ಎಲ್ಲಾ ರಾಜಕಾರಣಿಗಳು ಮಾಡಿರುವುದನ್ನು ಅವರು ಎತ್ತಿ ತೋರಿಸುತ್ತಿದ್ದಾರೆ. ಅವರ ಮಾತನ್ನು ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಯಾವುದೋ ಒಂದು ಪೇಪರ್ ನಲ್ಲಿರುವುದನ್ನು ಇವರು ಓದಿಬಿಟ್ಟರು. ಟೈಂಸ್ ಆಫ್ ಇಂಡಿಯಾ ಪೇಪರ್‌ಗೇ ಇಲ್ಲಿ ಮರ್ಯಾದೆ ಇಲ್ಲ. ಬೇರೆ ಪತ್ರಿಕೆಗಳಿಗೂ ಇಲ್ಲಿ ಮರ್ಯಾದೆಯಿಲ್ಲ.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಶ್ರೀ ಎನ್. ಧರಂಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಶ್ರೀರಾಮರೆಡ್ಡಿಯವರೇ, ಒಂದು ನಿಮಿಷ. ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ಇದೇ ರಾಷ್ಟ್ರಮಟ್ಟದಲ್ಲಿ ಮತ್ತು ಅಂತರ್‌ರಾಷ್ಟ್ರ ಮಟ್ಟದಲ್ಲಿ ಸಾಕಷ್ಟು ಚರ್ಚೆಯಾಗುತ್ತಿದೆ. ನಮ್ಮ ಪ್ರತಿನಿಧಿಗಳು ಹೋದಾಗ, ಪ್ರಧಾನ ಮಂತ್ರಿಗಳೂ ಕೂಡ ಇದರ ಬಗ್ಗೆ ತಮ್ಮ ವಿಚಾರವನ್ನು ವ್ಯಕ್ತ ಮಾಡಿದ್ದಾರೆ. ಇದು ಬಹಳ ಗಂಭೀರವಾದಂಥ ಒಂದು ಪ್ರಶ್ನೆ. ಇವತ್ತು ಮಾನ್ಯ ಶ್ರೀರಾಮರೆಡ್ಡಿಯವರು ಯಾವುದೋ ಒಂದು ಪತ್ರಿಕೆಯಲ್ಲಿ ಬಂದಿರುವುದನ್ನು ಹೇಳುತ್ತಿದ್ದಾರೆ. ಇಂಥವು ಎಷ್ಟೋ ಪತ್ರಿಕೆಗಳಿವೆ. ಗುಪ್ತಾ ಮಾರ್ಕೆಟ್ ಹತ್ತಿರ ಹೋದರೆ, ಇಂಥ ಸಾಕಷ್ಟು ಪತ್ರಿಕೆಗಳು ಸಿಗುತ್ತವೆ. ಅಧ್ಯಕ್ಷರಲ್ಲಿ ನಾನು ಮನವಿ ಮಾಡುತ್ತಿದ್ದೇನೆ, ಸಭಾ ನಾಯಕರೂ ಕೂಡ ಸದನದಲ್ಲಿದ್ದಾರೆ, ಆ ಪತ್ರಿಕೆಗಳನ್ನು ಆಧಾರವಾಗಿಟ್ಟುಕೊಂಡು ಮಾತನಾಡ ಲಾಗುವುದಿಲ್ಲ. ಗಂಭೀರವಾದಂಥ ಒಂದು ವಿಚಾರದ ಬಗ್ಗೆ ನಮ್ಮ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ, ಮಾತು ಕೇಳಿಬರುತ್ತಿದೆ, ಇದೆಲ್ಲವನ್ನೂ ಇಟ್ಟುಕೊಂಡು ಇದರ ಬಗ್ಗೆ ಗಂಭೀರವಾದಂಥ ಚರ್ಚೆಯಾಗಬೇಕಾಗಿದೆ. ನಿಲುವಳಿ ಸೂಚನೆಯನ್ನು ಪ್ರಸ್ತಾಪಿಸುವಾಗ, ಎಲ್ಲಾ ವಿಷಯಗಳನ್ನೂ ಪ್ರಸ್ತಾಪ ಮಾಡಿ ಇದರಲ್ಲಿ ಅವರ ಹೆಸರು ಇದೆ, ಇವರ ಹೆಸರು ಇದೆ ಎಂದು ಏನು ಹೇಳುತ್ತಿದ್ದಾರೆ. ಅದು ಆಗಬಾರದು. ಏನು He is representing a party which has a ideological point of view. ಅವರು ರಾಷ್ಟ್ರಮಟ್ಟದ ಒಂದು ದೊಡ್ಡ ಪಕ್ಷದ ಪ್ರತಿನಿಧಿಗಳಾಗಿದ್ದಾರೆ. ಅಂತಹ ಒಂದು ಪಕ್ಷದ ಪ್ರತಿನಿಧಿಯಾಗಿ ತಾವು ಶಾಸಕರಾಗಿ ಆರಿಸಿ ಬಂದಿರುವ ತಾವು, ಇವತ್ತು ಇದರ ಆಗುಹೋಗುಗಳು ಏನಿವೆ, ಎಲ್ಲಿ ಎಡವಿದ್ದಾರೆ, ಏನು ಆಗಬೇಕಾಗಿದೆ ಎನ್ನತಕ್ಕಂಥಾದ್ದೂ ಕೂಡ ಪ್ರಿಲಿಮಿನರಿ ಸಬ್ಮಿಷನ್‌ನಲ್ಲಿ ಆಗಬೇಕು. ಅದು ಆಗಲಾರದೆ ಹೋದರೆ ಸರಿ ಯಾಗುವುದಿಲ್ಲ. ಇಲ್ಲಿ ಯಾವಾಗಲೂ ಕೂಡ ಸದನದಲ್ಲಿ ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಶಾಸಕರು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಯಾರೂ ಸಹ ಬೇಜವಾಬ್ದಾರಿಯಿಂದ ಮಾಡತಕ್ಕದ್ದಲ್ಲ. ಅದನ್ನು ಗಮನದಲ್ಲಿಟ್ಟುಕೊಂಡು ತಾವು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ. ನಾನು ಅಧ್ಯಕ್ಷರಿಗೆ ಬೇಡಿ ಕೊಳ್ಳುವುದೇನೆಂದರೆ, ತಾವು ಒಂದು ದಿನವನ್ನು ನಿಗದಿ ಮಾಡಿ ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಈಗ ತಾವು ಪ್ರಸ್ತಾಪ ಮಾಡಿ ಹೆಸರುಗಳನ್ನು ಇಲ್ಲಿ ಬಳಸಿಕೊಂಡು ಹೋದರೆ ಅದು ಸರಿಯಾಗುವುದಿಲ್ಲ. ನಾವೂ ಕೂಡ ಹೇಳಬೇಕಾಗುತ್ತದೆ. ನಾವು ಯಾರ ಪರವಾಗಿಯೂ ಇಲ್ಲ. ನಮ್ಮ ಕಾಲದಲ್ಲಿ

ಆಗಿಲ್ಲ. ಇದು ಯಾರ ಕಾಲದಲ್ಲಿ ಆಗಿದೆ ಎಂದು ನಾವು ಹೇಳುತ್ತೇವೆ. ಯಾರು ಹಸ್ತಾಕ್ಷರ ಹಾಕಿದ್ದಾರೆ ಎಲ್ಲವನ್ನೂ ಹೇಳುತ್ತೇವೆ. ನಾನೂ ಕೂಡ I was a PWD Minister, I was the Chief Minister of the State. ಎಲ್ಲೆಲ್ಲಿ ಯಾವ್ಯಾವ ಸಂದರ್ಭದಲ್ಲಿ ಏನಾಗಿದೆ ಅದೆಲ್ಲವನ್ನೂ ಹೇಳಬೇಕಾಗುತ್ತದೆ. ಅದಕ್ಕೆ ಇವತ್ತು ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ ಇದರ ಬಗ್ಗೆ ಸುದೀರ್ಘವಾದ ಚರ್ಚೆ ನಡೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಿ.

Sri R.V. Deshpande: He has taken my name.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಪ್ರಿಲಿಮಿನರಿ ಸಬ್‌ಮಿಷನ್ ಮಾಡಬೇಡವೆ?

ಶ್ರೀ ಆರ್.ವಿ. ದೇಶಪಾಂಡೆ : ನನ್ನ ಹೆಸರು ಪ್ರಸ್ತಾಪವಾಗಿದೆ. I should get an opportunity.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ನನಗೆ ಇವತ್ತು ನಿಜವಾಗಿಯೂ ಸಂತೋಷವಾಗಿದೆ. ಇವತ್ತು ಅದು ಯಾವ ಪತ್ರಿಕೆಯಲ್ಲೂ ಬಂದಿಲ್ಲ. ಯಾವ ಪತ್ರಿಕೆಯನ್ನು ಓದುವುದಿಲ್ಲವೋ ಆ ಪತ್ರಿಕೆಯಲ್ಲಿ ಇದು ಬಂದಿದೆ. ಆದರೆ ಅವರು ಏನು ಹೇಳುತ್ತಿದ್ದಾರೆಂದರೆ, ನೈಸ್ ಕಂಪನಿಯವರು ಯಾವ ಪ್ರಕಾರ ಪೊಲಿಟೀಶಿಯನ್ಸ್ ಮೇಲೆ ಈ ರೀತಿಯ ಗಂಭೀರವಾದ ಆಪಾದನೆ ಮಾಡುತ್ತಿದ್ದಾರೆಂದು, ಒಂದು ದೃಷ್ಟಿಯಲ್ಲಿ ಅವರು ನನ್ನ ಪರವಾಗಿ ವಕಾಲತ್ತು ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಹೌದು ಎಂದು ಹೇಳಿದರು. ಇವತ್ತು ಇದು ನನ್ನ ಭಾಗ್ಯ. ಏಕೆಂದರೆ ಮಾನ್ಯ ರೆಡ್ಡಿಯವರು ಹೈಕೋರ್ಟ್‌ನಲ್ಲೇನು ರಿಟ್ ಪಿಟಿಷನ್ ಮಾಡಿದ್ದರಲ್ಲಾ ನಾನು ನೈಸ್ ಕಂಪನಿಯಲ್ಲಿ ಶಾಮೀಲಾಗಿದ್ದೇನೆಂದು ನನ್ನ ಮೇಲೆಯೂ ಚಾರ್ಜ್ ಮಾಡಿದ್ದರು. ನಾನು ಶಾಮೀಲಾಗಿದ್ದೇನೆಂದು ಚಾರ್ಜ್ ಮಾಡಿದ್ದರು. ಶಿವಕುಮಾರ್ ಮೇಲೆ, ನನ್ನ ಮೇಲೆ ಚಾರ್ಜ್ ಮಾಡಿದ್ದರು. ಹೈಕೋರ್ಟ್ ಸ್ಟ್ರಿಕ್ಚರ್ ಪಾಸ್ ಮಾಡಿತು. ಸುಪ್ರೀಂ ಕೋರ್ಟ್‌ಗೆ ಹೋಯಿತು. ಅಲ್ಲಿಯೂ ನಾನು ನೈಸ್ ಕಂಪನಿಯ ಜೊತೆ ಶಾಮೀಲಾಗಿದ್ದೇನೆಂದು ಪಾರ್ಟಿ. ಇವತ್ತು ರೆಡ್ಡಿಯವರು ನನ್ನ ಪರವಾಗಿ ವಕಾಲತ್ತು ಮಾಡುತ್ತಿದ್ದಾರೆ. ದೇಶಪಾಂಡೆಯವರು ಒಳ್ಳೆಯವರು, ಖೇಣಿಯವರು ಹೇಳುತ್ತಿರುವುದು ತಪ್ಪು ಎಂದು ಹೇಳುತ್ತಿದ್ದಾರೆ, ಆದ್ದರಿಂದ ನನಗೆ ಸಂತೋಷ. Atleast ಇವತ್ತು ರೆಡ್ಡಿಯವರಿಗೆ ಗೊತ್ತಾಗಿದೆ

ದೇಶಪಾಂಡೆಯವರು ಇದರೊಳಗೆ ಇಲ್ಲ. ಅಷ್ಟೇ ಅಲ್ಲ ಒಂದು ರಾಷ್ಟ್ರೀಯ ಪಕ್ಷದ ಗೌರವಾನ್ವಿತ ಅಧ್ಯಕ್ಷರು, ಯಾರು ಎಸ್.ಎಂ. ಕೃಷ್ಣ, ದೇಶಪಾಂಡೆಯವರು ಈ ಪ್ರಾಜೆಕ್ಟ್‌ನಲ್ಲಿ ಶಾಮೀಲಾಗಿದ್ದಾರೆಂದು ಹೇಳಿದ್ದಾರಲ್ಲಾ ಅವರು ಇವತ್ತು ಉದಯ ನ್ಯೂಸ್‌ನಲ್ಲಿ, ಪತ್ರಿಕೆಯಲ್ಲಿ ಹೇಳುತ್ತಿದ್ದಾರೆ, ನೋಡಿ ದೇಶಪಾಂಡೆಯವರ ನೋಟ್ಸ್. I admire him, I appreciate him ಎಂದು ಅವರೇ ಹೇಳಿದ್ದಾರೆ This cannot be real estate project. ಇಪ್ಪತ್ತು ಸಾವಿರ ಎಕರೆ ಕೊಡಲು ಆಗುವುದಿಲ್ಲವೆಂದು ಅವರೇ ಹೇಳಿದ್ದಾರೆ ಎಂದು ನನ್ನ ಪರವಾಗಿ ಇವತ್ತು ಅವರೂ ಹೇಳುತ್ತಿದ್ದಾರೆ. ಏನೋ ನಮ್ಮ ಗ್ರಹಗಳು ಬದಲಾವಣೆಯಾಗಿದೆಯೆಂದು ಕಾಣಿಸುತ್ತಿದೆ. ಹಾಗಾಗಿ ನಾನು ಏನು ಹೇಳುತ್ತೇನೆಂದರೆ ಸತ್ಯ ಇವತ್ತಲ್ಲ ನಾಳೆ ಹೊರಕ್ಕೆ ಬರುತ್ತದೆ. ನಾನು ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ನಾನು ಕೈಗಾರಿಕಾ ಮಂತ್ರಿಯಾಗಿ ಹತ್ತು ವರ್ಷ ಕೆಲಸ ಮಾಡಿದ್ದೇನೆ. We are not worried about NICE, we are not worried about Toyota or Kirloskar or anybody. We are worried about the investments in the state. Karnataka is a very progressive state. ಈ ರಾಜ್ಯಕ್ಕೆ ಬಹಳ ಗೌರವವಿದೆ. ಈ ರಾಜ್ಯದಲ್ಲಿ ಇಂಡಸ್ಟ್ರಿಯಲಿಸ್ಟ್ ಬರಬೇಕು, ಜನರಿಗೆ ಉದ್ಯೋಗಾವಕಾಶ ಸಿಗಬೇಕು, Prosperity ಆಗ ಬೇಕೆಂಬ ಚಿಂತನೆ ಇದೆಯೇ ವಿನಹ, ಯಾವ ನೈಸ್? ಯಾವ ಖೇಣಿ? We are not worried about it. ಸುಪ್ರೀಂ ಕೋರ್ಟ್‌ನವರು, ಹೈಕೋರ್ಟ್‌ನವರು ಏನು ಮಾಡಿದ್ದಾರೆ ಎಂದು ಒಂದು ದಿನ ನಾವು ಆ ಜಡ್ಜ್‌ಮೆಂಟ್‌ಗಳ ಮೇಲೆ ಕಾಮೆಂಟ್ ಮಾಡಲಿಲ್ಲ. ಏಕೆಂದರೆ It is not our job. ಹಾಗಾಗಿ ಮಾನ್ಯ ನಾಯಕರು ಹೇಳಿದ ಹಾಗೆ ಅವರು ಇವತ್ತೇನು adjournment motion move ಮಾಡಿದ್ದಾರೆ, ಇದು ಖಂಡಿತವಾಗಿ ಒಳ್ಳೆಯ ವಿಚಾರ, ಇದರ ಬಗ್ಗೆ ಖಂಡಿತವಾಗಿ ಚರ್ಚೆಯಾಗ ಬೇಕಾಗಿದೆ. ಏಕೆಂದರೆ ಹೇಳುವುದಕ್ಕೇನಿದೆ? ಸತ್ಯವೇನಿದೆ ಎಂಬುದು ಗೊತ್ತಾಗಬೇಕು. ನಾಳೆ ಜನರಿಗೆ ಗೊತ್ತಾಗಬೇಕು. ಇವರಿಗೆ ಯಾರ್‍ಯಾರಿಗೆ ಏನೇನು ಜವಾಬ್ದಾರಿ ಇದೆ, ಯಾರು ತಪ್ಪು ಮಾಡಿದ್ದಾರೆ, ಯಾರು ಸರಿ ಮಾಡಿದ್ದಾರೆ ಎಲ್ಲವೂ ಗೊತ್ತಾಗಬೇಕು. ಹಾಗಾಗಿ ನಾನು ಒಂದು ವೇಳೆ ನಾಳೆ ಚಾಲೆಂಜ್ ಮೇಲೆ ಧರಣ ಮಾಡುತ್ತೇನೆ, ಎಂ.ಪಿ. ಪ್ರಕಾಶ್ ಮಾನ್ಯ ಸಚಿವರು ಅವರ ಕಡೆ ಮಾಡುತ್ತಾರೆ ಎಂದು ಕನ್‌ಫ್ಯೂಜನ್ ಕ್ರಿಯೇಟ್ ಮಾಡುವುದಿದೆ, ಡಿಸ್‌ಕಷನ್ ಆಗಲಿ.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೇ, ಚರ್ಚೆಗೆ ಅವಕಾಶ ಮಾಡಿ. ನಿಮ್ಮ ಹೆಸರನ್ನು ಪ್ರಸ್ತಾಪ..

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಲಿ. ಅವಕಾಶ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ರೆಡ್ಡಿಯವರ ಬಗ್ಗೆ ಯಾರ ಬಗ್ಗೆಯೂ ಆಗಲಿ ಹೇಳಿಲ್ಲ.

ಅಧ್ಯಕ್ಷರು : ಈಗ ಚರ್ಚೆಗೆ ತೆಗೆದುಕೊಂಡರೆ ಅವಕಾಶ ಕೊಡುತ್ತೇನೆ. ಅವರು ಮಾತನಾಡಲಿ. ಆಗ ನೀವು ಮಾತನಾಡಿ.

ಶ್ರೀ ಆರ್.ವಿ. ದೇಶಪಾಂಡೆ : ಅದಕ್ಕೆ ನನ್ನ ತಕರಾರೇನಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನನ್ನ ಮೇಲೆ ಸ್ಟ್ರಿಕ್ಚರ್ಸ್ ಪಾಸ್ ಆಗಿದೆ ಎಂಬ ಪದ ಬಳಸಿದ್ದಾರೆ.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ, ಅವರು ಮಾತನಾಡಲಿ. ಅನಂತರ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು adjournment motion ಬಗ್ಗೆ ಮಾತನಾಡುತ್ತಿಲ್ಲ. ಹೈಕೋರ್ಟ್ ಸ್ಟ್ರಿಕ್ಚರ್ಸ್ ಪಾಸ್ ಮಾಡಿದೆಯೆಂಬ ಪದವನ್ನು ಅವರು ಮಾತನಾಡುವಾಗ ಬಳಸಿದ್ದಾರೆ. I have to explain myself. ನಾನೇ ಪಿಟಿಷನರ್. ನನ್ನ ಮೇಲೆ ಸ್ಟ್ರಿಕ್ಚರ್ಸ್ ಪಾಸ್ ಆಗಿದೆಯೆಂದು ಅವರು ಇಡೀ ಸಭೆಯಲ್ಲಿ ನಿಂತುಕೊಂಡು ಸುಳ್ಳು ಹೇಳಿಬಿಟ್ಟರೆ ನಾವು ಕುಳಿತುಕೊಂಡು ಕೇಳಬೇಕೆ? ಜಡ್ಜ್‌ಮೆಂಟ್‌ನ್ನು ಇಲ್ಲಿಗೆ ತರಿಸಿ, ಜಡ್ಜ್‌ಮೆಂಟ್‌ಗಳನ್ನು ನೋಡಿಕೊಂಡೇ ನಾವು ರಿವ್ಯೂ ಹಾಕುವುದು.

(ಗೊಂದಲ)

* *

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, Whether it is High court or Supreme Court, ಯಾವುದಾದರೂ ತರಿಸಿ; ಫ್ಯಾಕ್ಟರೀ ಅದು. It has been filed by High Court and Supreme Court.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, We have not asked anything about Mr. Deshpande. ದೇಶಪಾಂಡೆಯವರನ್ನು ನಾನು ಬಾರಪ್ಪ ಇಲ್ಲಿ ಕೋರ್ಟ್ ಮುಂದೆ ಎಂದು ಕರೆದಿರಲಿಲ್ಲ. ನಾನು ಪಿಟಿಷನರ್. I have right to defend myself. ಹೈಕೋರ್ಟ್‌ನಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ನನ್ನ ವಿರುದ್ಧವಾಗಿ ಜಡ್ಜ್‌ಮೆಂಟ್ ಆಗಿದೆಯೆಂದು ಹೇಳುತ್ತಿರುವುದೇ ಮಹಾ ಅಪರಾಧ. ಸೋಮಶೇಖರರೆಡ್ಡಿಯವರ ಕೇಸ್‌ನಲ್ಲಿ ಏನಾಗಿದೆ ಅದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ. ಅದನ್ನೇ ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. Resjudicata ಆಗುತ್ತೆ ಮತ್ತೊಂದು ಸಲ ಇಲ್ಲಿ ನೀವು ಬರಬಾರದಾಗಿತ್ತು ಎಂಬುದನ್ನು ಮಾತ್ರ ಹೈಕೋರ್ಟ್, ಸುಪ್ರೀಂಕೋರ್ಟ್ ಹೇಳಿರುವುದನ್ನು ಬಿಟ್ಟರೆ ಹೈಕೋರ್ಟ್, ಸುಪ್ರೀಂ ಕೋರ್ಟ್ ಇವರಿಗೆ ಕ್ಲೀನ್ ಚಿಟ್ ಕೊಟ್ಟು ಕಳುಹಿಸಿಲ್ಲ. ಹೈಕೋರ್ಟ್, ಸುಪ್ರೀಂಕೋರ್ಟ್ ನೀವು ಮಾಡಿರುವುದೆಲ್ಲಾ great ಎಂದಲ್ಲ. ಇಲ್ಲಿ ಚರ್ಚೆಯಾಗಬೇಕು. Yes, I am prepared. No court has cleared him. No court has cleared, the Government in which Mr. Deshpande was the Industries Minister. * * Even now I say.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಅದೆಲ್ಲದರ ಬಗ್ಗೆ ಅನಂತರ ಮಾತನಾಡಿ. ಅವರು ಮಾತನಾಡಲಿ.

Sri J.C. Madhuswamy: Why should he say..

(ಗೊಂದಲ)

ಅಧ್ಯಕ್ಷರು: ಮಾಧುಸ್ವಾಮಿಯವರೇ.............

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲಾ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ಅವತ್ತು ಹೇಳಿರುವುದೇ ಇವತ್ತು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅವಕಾಶ ಕೊಡಿ ಎಲ್ಲಾ ಚರ್ಚೆಯಾಗಲಿ.

(ಗೊಂದಲ)

ಅಧ್ಯಕ್ಷರು: ಈ ತರಹವಾದರೆ ಏನೂ ಪ್ರಯೋಜನವಿಲ್ಲ. ಸುಮ್ಮನೆ ಎಲ್ಲಾ ನಿಂತುಕೊಳ್ಳುವುದು. ನಾನೂ ನಿಂತಿದ್ದೇನೆ. ನೀವೂ ನಿಂತಿದ್ದೀರಿ. ಏನು ಅದರರ್ಥ? ದಯಮಾಡಿ ಕೇಳಿ....

(ಗೊಂದಲ)

Sri J.C. Madhuswamy: I will prove it.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ನಮ್ಮ ವಿರುದ್ಧವಾಗಿ ಯಾವ ಸ್ಟ್ರಿಕ್ಚರ್ಸ್ ಪಾಸ್ ಆಗಿದೆ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾವ ಸ್ಟ್ರಿಕ್ಚರ್ಸ್ ಪಾಸ್ ಆಗಿದೆ ಎಂಬುದನ್ನು ಹೇಳಬೇಕು.

(ಗೊಂದಲ)

ಸ್ಟ್ರಿಕ್ಚರ್ಸ್ ಏನು ಪಾಸ್ ಆಗಿದೆ ಎಂಎಲ್‌ಎ ಮೇಲೆ?

Sri R.V. Deshpande: I will prove it.

(ಗೊಂದಲ)

ಅಧ್ಯಕ್ಷರು: ಕಲ್‌ಪ್ರಿಟ್ ಎನ್ನತಕ್ಕಂಥ ಪದವನ್ನು ಏನು ಬಳಸಲಾಗಿದೆ, ಅದನ್ನು ತೆಗೆಸಿ ಹಾಕಿದ್ದೇನೆ. ಅದನ್ನು ತೆಗೆಯಬೇಕು. ಅದನ್ನು ತೆಗೆದು ಬಿಡಿ.

(ಗೊಂದಲ)

ಅಧ್ಯಕ್ಷರು: ಇದೇನಿದು? ಇದೇನು ವಿಧಾನ ಸಭೆಯೇ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ. ಈ ತರಹ ನಡೆದುಕೊಂಡರೆ ನಾನು ಬೇರೆ ಬೇರೆ ರೀತಿಯ ಅಧಿಕಾರ ಉಪಯೋಗಿಸಬೇಕಾಗುತ್ತದೆ. ಎಷ್ಟು ಸಾರಿ ಹೇಳಿದರೂ ನಿಮ್ಮದು ಅಷ್ಟೇ. (ಗೊಂದಲ) ನಾನು ತೆಗೆಸಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ಆ ಪದವನ್ನು ಎಕ್ಸ್‌ಪಂಜ್ ಮಾಡಬೇಕು.

ಅಧ್ಯಕ್ಷರು : ಆಯಿತು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಪ್ರೂವ್ ಮಾಡುತ್ತೇನೆ ಬನ್ನಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಹೈಕೋರ್ಟ್ ನನ್ನ ಮೇಲೆ ಸ್ಟ್ರಿಕ್ಚರ್ಸ್ ಪಾಸ್ ಮಾಡಿದೆಯೇ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನನಗೆ ಪ್ರೊಟೆಕ್ಷನ್ ಬೇಕಾಗುತ್ತದೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಏನು ಪ್ರೊಟೆಕ್ಷನ್? How can he interpret with the judgment? ಬಾಯಿ ಮುಚ್ಚಿಕೊಂಡು ಕುಳಿತುಕೊಂಡರೆ ಹೇಗೆ ಬೇಕಾದರೆ ಹಾಗೆ ಮಾತನಾಡುತ್ತೀರಿ. ನನ್ನ ಮೇಲೆ ಯಾವ ಸ್ಟ್ರಿಕ್ಚರ್ ಪಾಸಾಗಿದೆ? ಹೈಕೋರ್ಟ್, ಸುಪ್ರೀಂ ಕೋರ್ಟ್ ನನ್ನ ಮೇಲೆ ಯಾವ ಸ್ಟ್ರಿಕ್ಚರ್ಸ್ ಪಾಸ್ ಮಾಡಿದೆಯೆಂದು ಹೇಳಬೇಕಲ್ಲಾ?

(ಗೊಂದಲ)

ಯಾವ ಸ್ಟ್ರಿಕ್ಚರ್ಸ್ ಪಾಸಾಗಿದೆ?

(ಗೊಂದಲ)

ಅಧ್ಯಕ್ಷರು: ಯಾರು ಬೇಕಾದರೂ.. ಗೋಡಾ ಹೈ ಮೈದಾನ್ ಹೈ. ವಿಧಾನಸಭೆ ಎಂದರೆ....... ಜನತೆ ಇವರನ್ನೆಲ್ಲಾ ನೋಡಲಿ. ಜನತೆ ಇವರ ಬಿಹೇವಿಯರ್ಸ್‌ನೆಲ್ಲ ನೋಡಲಿ. ಆನಂದ ಪಡಲಿ. ಯಾವುದು ರೆಕಾರ್ಡ್‌ಗೆ ಹೋಗುವುದು ಬೇಡ. ಯಾವುದು ರೆಕಾರ್ಡ್‌ಗೆ ಹೋಗಬಾರದು. * * *

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳತಕ್ಕ ಧಾಟಿಯಲ್ಲಿ ಒಂದು ಪದವನ್ನು ಬಳಸಿದರು. ಅದೇನೆಂದರೆ, *** ಈ ರೀತಿಯಾಗಿ ಇಂಥ ಪದವನ್ನು ಉಪಯೋಗ ಮಾಡಿದರೆ ಅದು ಸರಿಯಲ್ಲ. ಅದು ರೆಕಾರ್ಡ್ ಆಗಿದೆಯೋ ಏನೋ ಗೊತ್ತಿಲ್ಲ. ನಾವಂತೂ ಅದನ್ನು ಕೇಳಿದ್ದೇವೆ.

ಅಧ್ಯಕ್ಷರು: ಕಲ್‌ಪ್ರಿಟ್ ಎನ್ನತಕ್ಕ ಪದವೇನು ಉಪಯೋಗವಾಗಿದೆ ಅದನ್ನು ತೆಗೆಸಿ ಹಾಕಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈ ರೀತಿಯಾಗಿ ಹೇಳಬಾರದು.

ಶ್ರೀ ಆರ್.ವಿ. ದೇಶಪಾಂಡೆ: ಅದು ನನ್ನ ಬಗ್ಗೆಯಲ್ಲ. ನಮ್ಮೆಲ್ಲರ ಬಗ್ಗೆಯೂ ಹೇಳಿದರು.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು : ಭಾವೋದ್ರೇಕಕ್ಕೆ ಯಾರೂ ಒಳಗಾಗತಕ್ಕ ಅಗತ್ಯವಿಲ್ಲ. ನಾನೇನು ಪ್ರೊಸೀಡಿಂಗ್ಸ್ ನೋಡಿ ಅನ್‌ಪಾರ್ಲಿಮೆಂಟರಿ ವರ್ಡ್ಸ್‌ನ್ನು ಯಾರೇ ಉಪಯೋಗ ಮಾಡಿದ್ದರೂ ತೆಗೆಸಿ ಹಾಕಲು ಕ್ರಮ ತೆಗೆದುಕೊಳ್ಳುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಏನು ನಿಮಗೆ ಇಷ್ಟ ಬಂದಂತೆ ಮಾತನಾಡುತ್ತೀರಿ? ಹೈಕೋರ್ಟ್‌ಗೆ ಹೋದವರಿಗೆಲ್ಲಾ ಛೀಮಾರಿ ಹಾಕಿಸಿಕೊಳ್ಳಲು ಇರುವುದೆ? ನಮಗೆ ಯಾವ ಕೋರ್ಟ್ ಛಿಮಾರಿ ಹಾಕಿದೆ?

(ಗೊಂದಲ)

(ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು ಬಾವಿಗೆ ಬಂದರು)

ಅಧ್ಯಕ್ಷರು : ಇದೇನಿದು? ವಿರೋಧ ಪಕ್ಷದ ನಾಯಕರೆ, ನಿಮ್ಮ ಸದಸ್ಯರುಗಳಿಗೆ ಹೇಳಿ. ಇವರಿಗೆ ಯಾರೂ ಹೇಳುವವರು ಕೇಳುವವರು ಇಲ್ಲ. ಇವರಿಗೇನು ಅರಿವಿಲ್ಲವೆ? ನೀವು ನಿಮ್ಮ ಸ್ಥಾನಗಳಿಗೆ ಹೋಗಿ Go to your seats. ಜವಾಬ್ದಾರಿ ಇಲ್ಲ ಏನಿಲ್ಲ. ನೀವು ನಿಮ್ಮ ನಿಮ್ಮ ಆಸನಗಳಿಗೆ ಹೋಗಿ. ಇಲ್ಲಿ ಬಂದು ಎಲ್ಲರೂ ಏಕೆ ನಿಂತುಕೊಳ್ಳುತ್ತೀರಿ?

(ಗೊಂದಲ)

ಅಧ್ಯಕ್ಷರು : ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 12 ಗಂಟೆ 52ನಿಮಿಷಕ್ಕೆ ಮುಂದೂಡಲ್ಪಟ್ಟು ಹತ್ತು ನಿಮಿಷಗಳ ನಂತರ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು 1 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

6(ಎ) ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ: ಬಿಎಂಐಸಿ ಯೋಜನೆ ಬಗ್ಗೆ (ಮುಂದುವರಿದ ಚರ್ಚೆ).

ಅಧ್ಯಕ್ಷರು : ಈ ಸದನದ ಸದಸ್ಯರೆಲ್ಲರಿಗೂ ನಾನು ಮೊದಲಿಗೆ ಹೇಳುವುದೇನೆಂದರೆ.....

ಶ್ರೀ ಎನ್. ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಮಧ್ಯದಲ್ಲಿ ಆದಂತಹ ಘಟನೆಯ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ಮಾತನಾಡಲು 5 ನಿಮಿಷ ಕಾಲಾವಕಾಶವನ್ನು ಕೊಡಿ.

ಶ್ರೀ ಎನ್. ಧರ್ಮಸಿಂಗ್ : ಆ ರೀತಿಯಾಗುವುದಿಲ್ಲ. ಈಗ ಅದರ ಬಗ್ಗೆ ಬಿಡಿ ಅದು ಹೋಯಿತು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಶ್ರೀರಾಮರೆಡ್ಡಿಯವರೆ, ತಾವು ಕುಳಿತುಕೊಳ್ಳಿ ಸಾಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸಾಕು ನೀವು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ರಮೇಶ್‌ಕುಮಾರ್‌ರವರೆ, ನೀವೇನಪ್ಪ.....

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಪ್ರಕಾಶ್‌ರವರೆ, I am telling you. ಇದು ದೊಡ್ಡ ರಿಪರ್‌ಕೇಷನ್ ಆಗುತ್ತದೆ ಮಾನ್ಯ ಶ್ರೀರಾಮರೆಡ್ಡಿಯವರೇ, ಸ್ವಲ್ಪ ನಿಲ್ಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾರ್‍ಯಾರು ಪ್ರಾಮಾಣಿಕರೆಂದು ಎಲ್ಲರಿಗೂ ಗೊತ್ತಿದೆ. I never said it. ನೀವು ನನ್ನ ಮೇಲೆ ಏಕೆ ಆಪಾದನೆಯನ್ನು ಮಾಡುತ್ತಿದ್ದೀರಿ?

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ.....

(ಗೊಂದಲ)

ಅಧ್ಯಕ್ಷರು : ಈಗ ನನಗೆ ಅರ್ಥವಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಏಕೆ ಮೈ ಪರಚಿಕೊಳ್ಳುತ್ತಿದ್ದೀರಿ. I never said it.

(ಗೊಂದಲ)

ಅಧ್ಯಕ್ಷರು : ಈ ರೀತಿ ಸಭೆಯಲ್ಲಿ ಮಾಡುವುದರಿಂದ ಯಾರಿಗೂ ಶೋಭೆ ಬರುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ....

ಅಧ್ಯಕ್ಷರು : ದಯವಿಟ್ಟು ತಡೆಯಿರಿ, ಅವರು ಕುಳಿತುಕೊಳ್ಳಲಿ. ಈಗ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಸಭೆಯನ್ನು ಉದ್ದೇಶಿಸಿ ಹೇಳುತ್ತಿದ್ದೇನೆ. ಈ ರೀತಿ ಮಾಡುವುದರಿಂದ ಯಾರಿಗೂ ಗೌರವ

ತರುವಂಥದಲ್ಲ. ಈಗ ಅವರು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಕೊಟ್ಟಿದ್ದಾರೆ. ನಾನು ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಅವರು ಒಂದು ಪತ್ರಿಕೆಯನ್ನು ಕೋಟ್ ಮಾಡಿ ಹೇಳಿದ್ದರು. ಅದಕ್ಕೆ ದೇಶಪಾಂಡೆಯವರು ಎದ್ದು ನಿಂತರು, ಅದನ್ನು ಕ್ಲಿಯರ್ ಮಾಡಿಕೊಳ್ಳುವ ಸಲುವಾಗಿ ಅವರು ನಿಂತರು. ಇವರು ಹೇಳಿದರು ಎಂದು ಅದನ್ನು ಕ್ಲಿಯರ್ ಮಾಡಿಕೊಳ್ಳುತ್ತೇನೆಂದು ಇವರು ಎದ್ದು ನಿಂತರು. ದಯಮಾಡಿ ಕೇಳಿ ಈ ರೀತಿ ಗೊಂದಲ ಮಾಡುವುದರಿಂದ ಯಾರಿಗೂ ಏನು ಮಾಡುವುದಕ್ಕಾಗುವುದಿಲ್ಲ. ಭಾವೋದ್ವೇಗಕ್ಕೆ ಒಳಗಾಗತಕ್ಕಂತಹ ಅವಶ್ಯಕತೆ ಇಲ್ಲ. ಭಾವೋದ್ವೇಗಕ್ಕೆ ಒಳಗಾದರೆ ವಿಷಯದ ಗಂಭೀರತೆ ಹೊರಟು ಹೋಗುತ್ತದೆ. ಆದ್ದರಿಂದ ನಾನು ಹೇಳುತ್ತೇನೆ. ನೀವು ಯಾವುದೇ ವಿಚಾರದ ಬಗ್ಗೆ ಪ್ರತಿಪಾದನೆ ಮಾಡಿ, ನೀವು ಏನಾದರೂ ಹೇಳಿ, ಪಾರ್ಲಿಮೆಂಟರಿ ಪದ್ಧತಿಯಲ್ಲಿ ಏನಿದೆ ಅದನ್ನು ಗಂಭೀರವಾಗಿ ಹೇಳಿ. ಜನ ಇದರ ಬಗ್ಗೆ ಬಹಳ ತಪ್ಪಾಗಿ ತಿಳಿಯುತ್ತಾರೆ. ಅದಕ್ಕೋಸ್ಕರ ನಾನು ಮತ್ತೊಂದು ಸಲ ವಿನಂತಿ ಮಾಡುತ್ತೇನೆ. ಯಾರು ಏನೇನು ಮಾಡಿದರೂ ಭಾವೋದ್ವೇಗಕ್ಕೆ ಒಳಗಾಗಿ ಯಾರೂ ಮಾತನಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸ್ವಲ್ಪ ಧ್ವನಿಯನ್ನು ಕಡಿಮೆ ಮಾಡಿ ಮಾತನಾಡುತ್ತೇನೆ. ನನ್ನ ಓರಿಜಿನಲ್ ಧ್ವನಿ ಜೋರಾಗಿರುವುದರಿಂದ ತಾವು ತಪ್ಪು ತಿಳಿದುಕೊಳ್ಳಬೇಡಿ.

ಅಧ್ಯಕ್ಷರು : ಆಯಿತು ಹೇಳಿ ಸ್ವಾಮಿ.

ಶ್ರೀ ಎನ್.ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ಅವತ್ತೇ ಮೊದಲಿನ ದಿವಸ ಮಾಡಿರತಕ್ಕಂತಹ ರೀತಿಯಲ್ಲಿ ಶ್ರೀರಾಮ ರೆಡ್ಡಿಯವರು ಸ್ವಲ್ಪ ಲೇಟಾಗಿ ಹೋದರು. ನಾವು ಮೊದಲು ಕೊಟ್ಟೆವು, ನಮ್ಮದು ಆಯಿತು. ಇವತ್ತು ಅವರದ್ದು ಪ್ರಾರಂಭವಾಗಿದೆ. ಮಾನ್ಯ ಮಾಧುಸ್ವಾಮಿಯವರು ಮಾತನಾಡತಕ್ಕಂತಹ ಕಾಲದಲ್ಲಿ ನಾನು ಈ ರಾಜ್ಯದ ಮುಖ್ಯಮಂತ್ರಿಯಾದಾಗ ಮಾನ್ಯ ಮಾಧುಸ್ವಾಮಿಯವರು ಇದೇ ತರಹದ ನಿಲುವಳಿ ಸೂಚನೆಯನ್ನು ತಂದಿದ್ದರು. ಅದರ ಬಗ್ಗೆ ಚರ್ಚೆಯಾಗಿದೆ. ಆಗಿನ ಸಮ್ಮಿಶ್ರ ಸರ್ಕಾರದಲ್ಲಿ ಅವರು ನಿಲುವಳಿ ಸೂಚನೆ ತಂದಂತಹ ಸಂದರ್ಭದಲ್ಲಿ ನೀವು ರೆವಿನ್ಯೂ ಮಿನಿಸ್ಟರ್ ಆಗಿದ್ದೀರಿ. ನಾನು ಇದರ ಬಗ್ಗೆ ಉತ್ತರವನ್ನು ಕೊಟ್ಟಿದ್ದೇನೆ, ಮಾನ್ಯ ಪ್ರಕಾಶ್‌ರವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ರೇವಣ್ಣನವರು ಉತ್ತರವನ್ನು ಕೊಟ್ಟಿದ್ದಾರೆ. ಮಾನ್ಯ ಸಿಂಧ್ಯಾರವರೂ ಸಹ ಉತ್ತರವನ್ನು ಕೊಟ್ಟಿದ್ದಾರೆ. ಈ ಸದನದಲ್ಲಿ ಅದರ ಬಗ್ಗೆ ಚರ್ಚೆಯಾಗಿದೆ. ಇವತ್ತು

ಮಾನ್ಯ ಮಾಧುಸ್ವಾಮಿಯವರಿಗೆ ನಿಲುವಳಿ ಸೂಚನೆ ತರಲು ಹಕ್ಕಿದೆ ಅವರು ಹಿರಿಯ ಸದಸ್ಯರಾಗಿದ್ದಾರೆ. ಆದರೆ ಪ್ರಸ್ತಾಪ ಮಾಡತಕ್ಕಂತಹ ಕಾಲದಲ್ಲಿ ಏಕಾಏಕಿಯಾಗಿ ಯಾವುದೋ ಒಂದು ಪತ್ರಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ಇದರಲ್ಲಿ ದೇಶಪಾಂಡೆಯವರ ಬಗ್ಗೆ ಅದರ ಬಗ್ಗೆ ಮಾತನಾಡತಕ್ಕಂತಹದ್ದು ಏನಿದೆ, ಅದು ಸರಿಯಲ್ಲ. ನಾನೂ ಕೂಡ 40 ವರ್ಷಗಳ ಕಾಲ ಸದನದಲ್ಲಿದ್ದೇವೆ, ಯಾರ್‍ಯಾರು ಎಲ್ಲೆಲ್ಲಿ ಏನು ಮಾಡುತ್ತಾರೆ, ಏನೇನು ಆದೇಶವಿದೆ, ಏನೇನು ಇದೆ ಅದರ ಬಗ್ಗೆ ನಮಗೆ ಗೊತ್ತಿದೆ. ಅದರ ಬಗ್ಗೆ ನಾನೂ ಕೂಡ ಹೇಳಬೇಕಾಗುತ್ತದೆ. ಇವತ್ತು ನೀವೆಲ್ಲರೂ ಕೂಡ ** ಎಂದು ಹೇಳುತ್ತಾರೆ. ** ಅದನ್ನು ಸಾಬೀತು ಮಾಡಿ. ಯಾರು ಕಳ್ಳರಿದ್ದಾರೆ, ಎಲ್ಲಿ ಮಾಡಿದ್ದೇವೆಂದು ಹೇಳಿ. ನಾವು ಹೇಗೆ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಆಗುತ್ತದೆ? ಇವತ್ತು ಒಬ್ಬ ಸದಸ್ಯ ಸದನ ನಡೆಯತಕ್ಕಂತಹ ಕಾಲದಲ್ಲಿ ಈ ತರಹದ ವಿಚಾರ ಪ್ರಸ್ತಾಪ ಮಾಡಿದರೆ ನಮಗೆ ಸುಮ್ಮನೆ ಕೂರುವುದಕ್ಕಾಗುವುದಿಲ್ಲ. ಇವತ್ತು ಮಾನ್ಯ ಸಭಾಧ್ಯಕ್ಷರು ರಕ್ಷಣೆಗೆ ಬರಬೇಕು. ನಾನು ಪ್ರಸ್ತಾಪ ಮಾಡತಕ್ಕಂತಹ ಕಾಲದಲ್ಲಿ ಮೊದಲೇ ಹೇಳಿದ್ದೇನೆ. ಬಿಎಂಐಸಿ ಪ್ರಾಜೆಕ್ಟ್ ಏನಿದೆ, ಇದರ ಬಗ್ಗೆ ಇಡೀ ರಾಜ್ಯದಲ್ಲಿ ರಾಷ್ಟ್ರ ಮಟ್ಟದಲ್ಲಿಯೂ ಕೂಡ ಬಹಳಷ್ಟು ಕೂಡ ಚರ್ಚೆ ನಡೆಯುತ್ತಿದೆ. ಇದಕ್ಕೆ ಅವರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆ ಮಾಡುವ ಬಗ್ಗೆ ಒಂದು ದಿನ ನಿಗದಿ ಮಾಡಿ. ಇವೆಲ್ಲಾ ವಿಷಯಗಳು ಪ್ರಸ್ತಾಪ ಮಾಡುವ ಬಗ್ಗೆ ನಮಗೆ ಅವಕಾಶವನ್ನು ಕೊಡಬೇಕೆಂದು ನಾವು ಕೇಳಿಕೊಂಡಿದ್ದೇವೆ. ಉದ್ದೇಶಪೂರ್ವಕವಾಗಿ ಯಾರೋಬ್ಬರ ಮೇಲೆ ಹೇಳುವುದಕ್ಕೆ, ಆಪಾದನೆಯನ್ನು ಮಾಡಬೇಕು, ಪತ್ರಿಕೆಯಲ್ಲಿ ಬರಬೇಕು, ಈ ತರಹದ ಉದ್ದೇಶದಿಂದ ಮಾಡಬಾರದು. ಇವತ್ತು ನಾವೆಲ್ಲರನ್ನೂ ಕೂಡ ಜನ ಆರಿಸಿ ಕಳುಹಿಸಿದ್ದಾರೆ, ನಾವೆಲ್ಲರೂ ಬಂದಿದ್ದೇವೆ. ನಾವು ಜನರ ಅಭಿಪ್ರಾಯಗಳ ಬಗ್ಗೆ ಪ್ರಸ್ತಾಪ ಮಾಡಬೇಕೇ ಹೊರತು ನಮ್ಮ ಮನಸ್ಸಿನಲ್ಲಿರುವಂತಹ ವಿಷಯಗಳ ಬಗ್ಗೆ ಆರೋಪ ಮಾಡುವಂತಹದ್ದು ಯಾವುದೋ ಒಂದು ಪತ್ರಿಕೆ ಇಟ್ಟುಕೊಂಡು ಮಾಡತಕ್ಕದ್ದು ಸರಿಯಲ್ಲ. ಇವತ್ತು ಬಹಳಷ್ಟು ಪತ್ರಿಕೆಗಳು ಬರೆಯುತ್ತಾರೆ, ಹೋಗುತ್ತಾರೆ, ಅದು ಆಗುತ್ತದೆ. ಆದರೆ ಇವತ್ತು ಅವರು ಏನು ದೇಶಪಾಂಡೆಯವರ ವಿರುದ್ಧ ಹೇಳಿದ್ದಾರೆ. ಮತ್ತೆ ಬರುತ್ತಾ ಬರುತ್ತಾ ** ನೀವು ಹೇಳಿ ಇದರ ಬಗ್ಗೆ ಸಾಬೀತು ಮಾಡಿ. ಈ ತರಹದ ಪದಗಳನ್ನು ನೋಡಿ ಈಗ

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

1.30 ಪಿಎಂ

ಮಾನ್ಯ ವಾಟಾಳ್‌ನಾಗರಾಜ್‌ರವರು ಗಪ್ಪನೇ ಕುಳಿತುಬಿಟ್ಟಿದ್ದಾರೆ. ಶ್ರೀರಾಮರೆಡ್ಡಿಯವರು ಮತ್ತು ನಾವು ಏನು ಹೇಳಿದೆವು. you are representing a political party ಬಿಡಿ. ಒಂದು ಪೊಲಿಟಿಕಲ್ ಪಾರ್ಟಿ ಇದೆ. Ideological ಇದ್ದೀರಿ. ಇವತ್ತು ಇಲ್ಲಿ ಏನಾಗಿದೆ ಎನ್ನತಕ್ಕಂತಹ ಅಂಶಗಳು ಪ್ರಸ್ತಾಪ ಮಾಡಿ. ** ಯಾರ್ಯಾರು ಏನೇನು ಮಾಡಿದ್ದಾರೆ. ನಾವೂ ಕೂಡ ಹೇಳುತ್ತೇವೆ. ಇವತ್ತು ಯಾರೋ ಬಂದು ಓಹೋ ನಮ್ಮ ದೇಶ ಹೀಗೆ ಹಾಗೆ ಎಂದು ಹೇಳುತ್ತಾರೆ. ಅದರ ಬಗ್ಗೆ ನಮಗೂ ಕೂಡ ಗೊತ್ತಿದೆ. 1994ರ ಬಗ್ಗೆ ನಾವೆಲ್ಲಾ ತೆಗೆಯುತ್ತೇವೆ. ಯಾರ್ಯಾರ ಕಾಲದಲ್ಲಿ ಏನೇನು ಆಗಿದೆ ನೋಡುತ್ತೇವೆ, ನಮ್ಮ ಕಾಲದಲ್ಲಿ ಏನಾಗಿದೆ ಇದರ ಬಗ್ಗೆ ನಾವೇ ಹೇಳೋಣ. ಇದರ ಬಗ್ಗೆ ಪ್ರಸ್ತಾಪವಾಗಿದೆ. ಇವತ್ತು ಇಂಥ ಸಂದರ್ಭದಲ್ಲಿ ಒಂದು ಗುರುತರವಾದ ಶಬ್ದಗಳನ್ನು ಬಳಸುವ ಸಂದರ್ಭದಲ್ಲಿ ಒಂದು ಇತಿಮಿತಿ ಇರಬೇಕು. ಹತೋಟಿ ಇರಲಿ, ಈ ರೀತಿ ಮಾತನಾಡಿದರೆ ನಾವು ಹೇಗೆ ಸುಮ್ಮನೆ ಕೊಡಲಿಕ್ಕಾಗುತ್ತದೆ? ನಮಗೆ ನೀವು ರಕ್ಷಣೆಯನ್ನು ಕೊಡಬೇಕು. ನೀವು ಗಪ್ ಅಂತ ಕೊಡಿ ಎಂದು ಘಂಟೆ ಬಾರಿಸಿದರೆ ಹೇಗೆ? ಗಪ್ ಆಗಿ ಹೇಗೆ ಕೊಡಲಿಕ್ಕಾಗುತ್ತದೆ.

ಅಧ್ಯಕ್ಷರು : ಕುಳಿತುಕೊಳ್ಳಿ ಎಂದು ಹೇಳದೆ ನಿಂತುಕೊಳ್ಳಿ ಎಂದು ಹೇಳಲಿಕ್ಕಾಗುತ್ತದೆಯೆ?

ಶ್ರೀ ಧರಂಸಿಂಗ್ : ನಿಂತುಕೊಳ್ಳುವುದು ಎನ್ನುವುದಲ್ಲ. ಇವತ್ತು ನಮ್ಮದು ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಇದೆ. ಮೇಲಿಂದ ಮೇಲೆ ಆಪಾದನೆ ಮಾಡಿದರೆ ನಾಡಿನ ಪತ್ರಿಕೆಯಲ್ಲಿ ಬರುತ್ತದೆ. ಅವರು ನಮಗೆ ಕೇಳುತ್ತಾರೆ, ಅವರಿಗೆ ಯಾರು ಕೇಳುವವರು ಇದ್ದಾರೆ? ಹಾಗಾಗಿ ಇಂಥ ಶಬ್ದಗಳನ್ನು ಬಳಕೆ ಮಾಡುವಾಗ ಸ್ವಲ್ಪ ಹತೋಟಿಯಲ್ಲಿಟ್ಟುಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಖರ್ಗೆಯವರೇ ನನ್ನ ವಿನಂತಿಯೇನೆಂದರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ನಾನು ವಿನಂತಿಮಾಡಿಕೊಳ್ಳುತ್ತೇನೆ ಅಷ್ಟೆ.

ಅಧ್ಯಕ್ಷರು : ಈಗಾಗಲೇ ಈ ಸದನದಲ್ಲಿ ಬಳಸಿರುವ ಕಳ್ಳರು, ಕಲ್‌ಪ್ರಿಟ್ ಎಂಬ ಪದಗಳನ್ನು ಕಡತದಿಂದ ತೆಗೆದು ಹಾಕಲಿಕ್ಕೆ ನಾನು ಹೇಳಿದ್ದೇನೆ. ತೆಗೆದುಹಾಕಲಾಗಿದೆ.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

(ಗೊಂದಲ)

(ಗೊಂದಲ)

(ಈ ಹಂತದಲ್ಲಿ ಹಿಂದಿನ ಸಾಲಿನಲ್ಲಿದ್ದ ಕಾಂಗ್ರೆಸ್ ಸದಸ್ಯರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದರು)

ಅಧ್ಯಕ್ಷರು : ಈಗ ವಿರೋಧ ಪಕ್ಷದ ಸದಸ್ಯರುಗಳೇ, ನಿಮ್ಮ ಅಧ್ಯಕ್ಷರು ಎದ್ದು ನಿಂತಿದ್ದರೂ ನೀವೆಲ್ಲಾ ಹೀಗೆ ನಿಂತಿದ್ದೀರಿ. ಅವರಿಗೆ ನಾನು ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ. ಹೀಗೇಕೆ ನೀವೆಲ್ಲಾ ನಿಂತುಕೊಂಡಿದ್ದೀರಿ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನನ್ನದೊಂದೇ ಧ್ವನಿ ಕೇಳುವುದಿಲ್ಲವೆಂದು ಅವರು ನಿಂತಿದ್ದಾರೆ. ಇಲ್ಲಿ ನಾವೆಲ್ಲರೂ ಕೂಡ ಸೇರತಕ್ಕಂಥದ್ದು ಮತ್ತು ನಾವು ಧರಣಿಯನ್ನು ಕೂಡ ವಾಪಸ್ಸು ತೆಗೆದುಕೊಂಡಿದ್ದು ಏನೋ ಒಂದು ಒಳ್ಳೆಯ ಚರ್ಚೆ ನಡೆಯಲಿಕ್ಕೆ ಮತ್ತು ರಾಜ್ಯದ ಸಮಸ್ಯೆಗಳು ಅಥವಾ ಜನರ ಸಮಸ್ಯೆಗಳನ್ನು ಚರ್ಚೆ ಮಾಡಿ ಅದಕ್ಕೆ ಸ್ಪಂದಿಸತಕ್ಕಂಥಾದ್ದು ಆಗಲಿ ಎನ್ನುವಂಥ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳೂ ಕೂಡ ನಾನು ಏನು ಹೇಳಿಕೆ ಕೊಟ್ಟಿದ್ದೇನೆ, ಅದು ಸತ್ಯಕ್ಕೆ ದೂರವಾದುದು, ಪತ್ರಿಕೆಯಲ್ಲಿ ಬಂದಿರುವುದು ಸರಿಯಿಲ್ಲ ಎಂದು ಹೇಳಿದರು. ನಾವು ಅಲ್ಲಿಗೇ ಅದನ್ನು ಬಿಟ್ಟಿದ್ದೇವೆ. ಆದರೆ ಚರ್ಚೆ ನಡೆದ ಕಾಲಕ್ಕೆ ನೀವು ಅನಾವಕಶ್ಯಕವಾಗಿ ಯಾರ ಹೆಸರು ಸಂಬಂಧ ಇಲ್ಲ ಅದನ್ನು ತೆಗೆದುಕೊಂಡು ಅವರ ಬಗ್ಗೆ ಶ್ರೀರಾಮರೆಡ್ಡಿಯವರು ಸರ್‌ಕ್ಯಾಸ್ಟಿಕ್ ಆಗಿ ಓದಿದರು. ಇವರು ತಿಳಿದುಕೊಂಡಿದ್ದು ಅದು. ಅದನ್ನು ಏಕೆ ರೆಫರ್ ಮಾಡಿದರು. ನೋಡಿ ಅದು ಯಾವ ಪೇಪರ್‌ನಲ್ಲಿ ಬಂದಿದೆ. ಪದೇ ಪದೇ ನೀವು ಅಂತಹ ಪೇಪರ್‌ಗಳನ್ನು ಪಾರ್ಲಿಮೆಂಟರಿ, ಅಸೆಂಬ್ಲಿಯಲ್ಲಿ ರೆಫರ್ ಮಾಡುತ್ತಿರಾ? ನಿಮ್ಮ ಅನುಕೂಲಕ್ಕೋಸ್ಕರ ಸರ್‌ಕ್ಯಾಸ್ಟಿಕ್ ಆಗಿ ಹೇಳುವುದಕ್ಕೋಸ್ಕರ ಅದನ್ನು ನೀವು ಪ್ರಸ್ತಾಪ ಮಾಡುತ್ತಿದ್ದೀರಿ. ಏತಕ್ಕೆ? ಯಾರ ಪರ ಎಂದು ಈಗ ಹೇಳುವುದಕ್ಕಾಗುವುದಿಲ್ಲ. ಸಂದರ್ಭ ಬಂದಾಗ ನಾನು ಹೇಳುತ್ತೇನೆ, ಆದರೆ ಅದು ಒಂದು ರೀತಿಯಿಂದ ಹೇಳುತ್ತಿರುವುದರಿಂದ, ಇನ್ನೊಂದು ರೀತಿಯಿಂದ ಮಾನ್ಯ ದೇಶಪಾಂಡೆಯವರು ಹೇಳಿದ್ದು ಏನು, ದೇಶಪಾಂಡೆಯವರು ಹೇಳಿದ್ದು ಏನು? ಹೈಕೋರ್ಟ್ / ಸುಪ್ರೀಂಕೋರ್ಟ್‌ನಲ್ಲಿ ಯಾರು ಪಿಟಿಷನರ್ಸ್ ಇದ್ದರೋ, ಅವರ ಮೇಲೆ ಕಾಸ್ಟ್ ರಿಕವರಿ ಮಾಡತಕ್ಕಂಥ ಒಂದು ಜಡ್ಜ್‌ಮೆಂಟ್ ಬಂತು ಅಂತ ಅಂದರೆ ಅದರ ಅರ್ಥ ಏನು ನೀವು ಹಾಕಿದ ಕೇಸು ಸರಿಯಿಲ್ಲವೆಂದು

ಅದನ್ನು ವಿತ್ ಕಾಸ್ಟ್ ಅದನ್ನು ಡಿಸ್‌ಮಿಸ್ ಮಾಡಿದ ಮೇಲೆ ಅದನ್ನು ನೀವು ಫನಿಷ್‌ಮೆಂಟ್ ಎಂದು ತಿಳಿದುಕೊಳ್ಳುತ್ತೀರೋ ಫ್ರಾಡ್ ಆಗಿ ತಿಳಿದುಕೊಳ್ಳುತ್ತೀರೊ ಅದು ತಪ್ಪೋ ಸರಿಯೋ ಪನಿಷ್‌ಮೆಂಟೋ ಏನೋ? ಅಂದರೆ ಅದರ ಅರ್ಥ ಏನು? ನಿಮ್ಮ ಪೆಟಿಷನ್ಸ್ ಸರಿಯಲ್ಲ. ಇದಕ್ಕಾಗಿ ಇಷ್ಟು ಕಾಸ್ಟ್ ಕೊಡಬೇಕು ಎಂದರೆ ಅದರ ಅರ್ಥ ಹಾಕಿದವರು ತಪ್ಪು ಮಾಡಿದ್ದಾರೆಂದು ಬರುತ್ತದೋ ಇಲ್ಲವೋ? ಅದನ್ನೇ ಒಂದು ದೊಡ್ಡದು ಮಾಡಿಕೊಂಡು ನೀವು ಫ್ರಾಡ್ ಎಂದು ಇವರನ್ನು ಚಾರ್ಜ್ ಮಾಡುವುದು, ಕೊನೆಗೆ ಎಲ್ಲಿಯವರೆಗೆ ಹೋದರೂ ಅಂದರೆ, ** ಈ ಭಾಷೆ. ಒಬ್ಬರು ಹಿರಿಯ ಸದಸ್ಯರು. ಮಾತನಾಡುವಾಗ ಪ್ರತಿಯೊಂದು ಮಾತನ್ನು ಅನೇಕ ಸಾರಿ ಎಲ್ಲರೂ ಕೂಡ ಅಟೆಂಟೀವ್ ಆಗಿ ಕೇಳುತ್ತಾರೆ. ** ಇದು ಸರಿಯಲ್ಲ. ನಾನು ಅಂದಿದ್ದು ತಪ್ಪು ಎಮೋಷನ್ಸ್ ಆಗಿ ಹಾಗೆ ಮಾತನಾಡಿದೆ. ಅದು ತಪ್ಪು, ನಾನು ಎಲ್ಲರಿಗೂ ಹೇಳಬೇಕೆಂದು ಹೇಳಲಿಕ್ಕೆ ಹೋಗಲಿಲ್ಲ. ಇದಕ್ಕೆ ಅಪಾಲಜಿ ನಾನು ಕೇಳುತ್ತೇನೆ ಎಂದರೆ ಇದು ಇಲ್ಲಿಗೇ ಮುಕ್ತಾಯ ಮಾಡುತ್ತೇವೆ. ಇಲ್ಲ ನಾನು ಹೇಳಿದ್ದೆ ಸರಿ ಎಂದರೆ ಇಂತಹ ಸದಸ್ಯರನ್ನು ಇಟ್ಟುಕೊಂಡು ಹೇಗೆ ಸಭೆಯನ್ನು ನಡೆಸುತ್ತೀರಿ ಎಂಬುದು ತಮಗೆ ಬಿಟ್ಟಿದ್ದು. ಅದಕ್ಕೆ ನಾನು ಇಷ್ಟು ಮಾತ್ರ ಕೇಳುತ್ತೇನೆ ತಮಗೆ ಕೈಜೋಡಿಸಿ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಸದನ ಸ್ಮೂತ್ ಆಗಿ ನಡೆಯಬೇಕೆಂದರೆ ಅವರು ಏನು ಪದವನ್ನು ಇಡೀ ಸದಸ್ಯರಿಗೆ ಬಳಸಿದ್ದಾರೋ ** ಬಗ್ಗೆ ಅನ್‌ಕಂಡೀಷನಲ್ ಅಪಾಲಜಿ ಕೇಳಬೇಕು. ಅಪಾಲಜಿ ಕೇಳದೆ ಹೋದರೆ ಈ ಸದನವನ್ನು ನಡೆಯಗೊಡುವುದಿಲ್ಲ ಎಂದು ನಾನು ಈ ಪಕ್ಷದ ಸೀನಿಯರ್ ಮೆಂಬರ್ ಆಗಿ ಹೇಳುತ್ತಿದ್ದೇನೆ. ನಾನೂ ಎಮೋಷನಲ್ ಆಗಿ ಮಾತನಾಡುತ್ತಿರಬಹುದು. ಆದರೆ ಎಲ್ಲರಿಗೂ ಸ್ವಾಭಿಮಾನವಿರುತ್ತದೆ. ಎಲ್ಲರಿಗೂ ಸಾರಸಗಟಾಗಿ ನೀವು ಈ ಭಾಷೆಯನ್ನು ಉಪಯೋಗ ಮಾಡಿದರೆ ನಮಗೂ ಅದಕ್ಕಿಂತಲೂ ಕೆಟ್ಟ ಭಾಷೆ ಉಪಯೋಗ ಮಾಡಲಿಕ್ಕೆ ಬರುತ್ತದೆ, ಮಾಡಿದ್ದೇವೆ. ಆದರೆ ಈ ರೀತಿಯಾಗಿ ಇವತ್ತು ಅವರು ಏತಕ್ಕೆ ಹೇಳಿದರೂ ಎನ್ನುವುದು ತಿಳಿಯುತ್ತಿಲ್ಲ, ಅಥವಾ ಯಾರದಾದರೂ ಪ್ರಚೋದನೆಯಿಂದ ಹೇಳಿದರೋ ಸ್ವಯಂಪ್ರೇರಿತವಾಗಿ ಹೇಳಿದರೋ ಅಥವಾ ಯಾರಾದರೂ ಹೇಳಿಕೊಟ್ಟಿದ್ದರೋ ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ಆಪಾದನೆಯನ್ನು ಮಾಡಲಿಕ್ಕೆ ಹೋಗುವುದಿಲ್ಲ, ಅದಕ್ಕಾಗಿ ದಯವಿಟ್ಟು ಅವರಿಗೆ ಅನ್‌ಕಂಡಿಷನಲ್ ಅಪಾಲಜಿ ಕೇಳುವಂತೆ

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಡೈರೆಕ್ಷನ್ಸ್ ಕೊಡಿ. ಅವರ ಅನ್‌ಕಂಡಿಷನಲ್ ಅಪಾಲಜಿ ಕೇಳಿದ ಮೇಲೆ ಮುಂದಕ್ಕೆ ಸದನ ನಡೆಯಲಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಈ ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ನಾನು ರುಜು ಹಾಕಿರಲಿಲ್ಲ. ಹಾಗಾಗಿ ನಾನು ಭಾಗವಹಿಸಬಾರದು ಎಂದು ಸುಮ್ಮನೆ ಕುಳಿತಿದ್ದೆ. ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಪ್ರಿಲಿಮಿನರಿ ಬ್ರೀಪಿಂಗ್ ಮಾಡಬೇಕಾದರೆ ಆಕಸ್ಮಾತ್ ಏನಾದರೂ ತಕರಾರು ತೆಗೆದುಕೊಂಡರೆ ಸರ್ಕಾರ ತೆಗೆದುಕೊಳ್ಳಬೇಕು, ಆದರೆ ಈ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಮೂವ್ ಮಾಡಲಾರದಂಥ ಸ್ಥಿತಿ ನಿರ್ಮಾಣವಾಗಿತ್ತು. ಆ ಪರಿಸ್ಥಿತಿಯಿದ್ದರೂ ನನಗೇನೂ ಸಂಬಂಧವಿಲ್ಲವೆಂದು ನಾನು ಸುಮ್ಮನೆ ಕುಳಿತಿದ್ದೆ. ಆದರೆ ಸನ್ಮಾನ್ಯ ದೇಶಪಾಂಡೆಯವರ ಬಗ್ಗೆ ಶ್ರೀರಾಮರೆಡ್ಡಿಯವರು ಪೇಪರ್‌ನಲ್ಲಿರುವುದನ್ನು ಓದಿದಾಗ Petitioners themselves have cleared me ಅವರಿಗೆ ಸ್ಟ್ರಿಕ್ಚರ್ಸ್ ಪಾಸ್ ಆಯಿತು. ಅವರಿಗೆ ಹೈಕೋರ್ಟ್ ದಂಡ ಹಾಕಿತು ಎಂದು ಏನು ಈ ತಪ್ಪು ಮಾಹಿತಿಯನ್ನು ಸದನಕ್ಕೆ ಕೊಟ್ಟರು, ನಾನು ನನ್ನ ರಕ್ಷಣೆಯನ್ನು ಮಾಡಿಕೊಳ್ಳಬೇಕಾಯಿತು. ಪಿಟಿಷನರ್ಸ್‌ಗೆ ಹೈಕೋರ್ಟ್ ದಂಡ ಹಾಕಿಲ್ಲ ಅಧ್ಯಕ್ಷರೇ, ನಾನೇ ಹೇಳಲಿಕ್ಕೆ ಹೊರಟಿದ್ದೆ. This is resjudicata ಎಂದು ಈ ಕೇಸನ್ನು ಸುಪ್ರೀಂಕೋರ್ಟ್ ಇದನ್ನು ಬದಿಗಿಟ್ಟಿರೋದು ಬಿಟ್ಟರೆ, ಈಗಾಗಲೇ ಸೋಮಶೇಖರ್ ರೆಡ್ಡಿ ಅವರ ಕೇಸಿನಲ್ಲಿ ತೀರ್ಮಾನ ಆಗಿರುವ ವಿಷಯವನ್ನು ಮತ್ತೆ ಕೋರ್ಟ್‌ನಲ್ಲಿ ಪ್ರಸ್ತಾವ ಮಾಡಿ ಕೋರ್ಟ್ ಸಮಯವನ್ನು ನೀವು ಹಾಳು ಮಾಡಿದ್ದೀರಿ ಎಂದು ಕಾಸ್ಟ್ ಹಾಕುವುದನ್ನು ಬಿಟ್ಟರೆ ಇಂಡಿವಿಜಿಯಲ್ ಆಗಿ ನಾನು ದೇಶಪಾಂಡೆಯವರ ಮೇಲೆ ಕೇಸು ಹಾಕಿಲ್ಲ. ಲೆಟ್ ಮಿ ಬಿ ಕ್ಲಿಯರ್. ಆದರೆ ಹೈಕೋರ್ಟ್‌ನಲ್ಲಿ ಕೇಸ್ ಫೈಲ್ ಮಾಡಬೇಕಾದರೆ ಯಾರ್‍ಯಾರು ಆ ಇಲಾಖೆಗಳಿಗೆ ಮಂತ್ರಿಗಳಾಗಿದ್ದರು, ಯಾರ್‍ಯಾರು ಆ ಇಲಾಖೆಗಳಲ್ಲಿ ಅಧಿಕಾರಿಗಳಾಗಿದ್ದರು. ಅವರಿಗೆಲ್ಲಾ ಸ್ವಾಭಾವಿಕವಾಗಿ ಹೈಕೋರ್ಟ್‌ನಲ್ಲಿ ನೋಟೀಸನ್ನು ನಾವು ಕೊಟ್ಟಿದ್ದೇವೆ. That never means to say ಎಲ್ಲದರಲ್ಲೂ ಕ್ಲಿಯರ್ ಆಗಿಬಿಟ್ಟಿದ್ದಾರೆಂದು ಹೈಕೋರ್ಟ್‌ನಲ್ಲಿ ಹೇಳಿಲ್ಲ. ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿರುವುದು resjudicata ಈಗಾಗಲೇ ಹೈಕೋರ್ಟ್‌ನಲ್ಲಿ ಈ ಕೇಸು ಒಂದು ಬಾರಿ ನಡೆದುಹೋಗಿಬಿಟ್ಟಿದೆ. ಒಂದು ಸಲ ಇತ್ಯರ್ಥವಾಗಿದ್ದ ಕೇಸನ್ನು ನೀವು

ಮತ್ತೆ ಪ್ರಶ್ನೆ ಮಾಡಬಾರದಾಗಿತ್ತು. ಮತ್ತೊಂದು ಗಹನವಾದಂಥ ವಿಷಯವನ್ನು ಹೈಕೋರ್ಟ್ ಹೇಳಿದ್ದು ನಿಮಗೆ ಶಾಸನಸಭೆಯಲ್ಲಿ ಇದನ್ನು ಇತ್ಯರ್ಥ ಮಾಡಿಕೊಳ್ಳಲಿಕ್ಕೆ ಬೇಕಾದಷ್ಟು ಅವಕಾಶಗಳಿದ್ದಾಗ ಹೈಕೋರ್ಟ್ ಮುಂದೆ ತಾವು ಬರುವ ಅವಶ್ಯಕತೆ ಇರಲಿಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದು ನನಗೆ ಸ್ಟ್ರಿಕ್ಚರ್ಸ್ ಆಗಿದೆ. ನಾನು ದಂಡ ಕಟ್ಟಿದ್ದೇನೆ. ನಾನು ಜೈಲಿಗೆ ಹೋಗುವಂಥ ಸ್ಥಿತಿ ನಿರ್ಮಾಣವಾಗಿದೆ ಎಂದು ಭಾವಿಸಿಕೊಂಡಿಲ್ಲ. ಯಾರಾದರೂ ಪೆಟಿಷನರ್ಸ್‌ಗೆ ಕಾಸ್ಟ್ ಅವಾರ್ಡ್ ಆಗಿತ್ತು ಎಂದರೆ ಇನ್ನು ಮುಂದೆ ಹೈಕೋರ್ಟ್‌ಗೆ ಯಾರೂ ಸಿವಿಲ್ ಮಿಸಲೇನಿಯಸ್ ಕೇಸ್ ಹಾಕಲಿಕ್ಕೇ ಆಗುವುದಿಲ್ಲ. ತೊಂಬತ್ತೊಂಭತ್ತು ಭಾಗ ಸಿವಿಲ್ ಕೇಸುಗಳಲ್ಲಿ ನಮ್ಮ ಕೇಸು ಹೋದರೆ ಅದರ್ ಪಾರ್ಟಿಗೆ ಕಾಸ್ಟ್ ಅವಾರ್ಡ್ ಮಾಡುವುದು ಸಂಪ್ರದಾಯ; ಕೋರ್ಟ್‌ಗಳೂ ಪಾಲಿಸಿಕೊಂಡು ಬಂದಿರುವ ನೀತಿಯದು. ಹಾಗಾಗಿ ಅದು ದಂಡ ಎಂದು ನಾನು ಭಾವಿಸಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ಪದೇ ಪದೇ ದಂಡ ಹಾಕಿದ್ದಾರೆ, ಅಂತ ಹೇಳಿದರೆ ನಾನು ಸುಮ್ಮನೆ ಇರಲಿಕ್ಕೆ ಆಗುವುದಿಲ್ಲ. ಒಂದು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್‌ನಲ್ಲಿ ದಂಡ ಕೊಡುವಂಥದ್ದು ನಮಗೇನಿರುತ್ತದೆ? ನನಗೆ ಅರ್ಥವಾಗಿಲ್ಲ. ನಾನು ಅದನ್ನು ಜಸ್ಟಿಫೈ ಮಾಡಲಿಕ್ಕೆ ಎದ್ದೆ, ಇಲ್ಲ ಅವರು ಹೇಳಿದ್ದು ನನಗೆ ದಂಡ ಹಾಕಲಿಕ್ಕೆ ಅಥವಾ ನನಗೆ ಸ್ಟ್ರಿಕ್ಚರ್ಸ್ ಪಾಸ್ ಮಾಡುವಂಥ ಯಾವುದೇ ಪೊಸಿಷನ್‌ನಲ್ಲಿ ನಾನು ಇಲ್ಲ, ಸಾರ್ವಜನಿಕರ ಹಿತಾಸಕ್ತಿಯನ್ನು ಬಯಸುವಂಥ ಒಬ್ಬ ಪೆಟಿಷನರ್‌ಗೆ ಕೋರ್ಟ್ ಸ್ಟ್ರಿಕ್ಚರ್ಸ್ ಪಾಸ್ ಮಾಡಲಿಕ್ಕೆ ಬರುವುದಿಲ್ಲ. ಪ್ಲೀಸ್; ನಾನು ಅವರ ಮಾತನ್ನು ಕೇಳಿದ್ದೇನಲ್ಲಾ. ಎರಡನೆಯದು ಏನಾಯಿತು I have been cleared. I have been given a clean chit. ಅದು ಇಲ್ಲಿ ಆಗಬಾರದಾಗಿತ್ತು. ಆ ಪದಗಳನ್ನು ಬಳಸಿದಾಗ ನಾವು ಹೇಳಿದೆವು ನಿಮ್ಮನ್ನು ಯಾರೂ ಕ್ಲಿಯರ್ ಮಾಡಿಲ್ಲ. ನಾವು ಈಗಲೂ ಅವರಿಗೆ ನೀವು ಕ್ಲಿಯರ್ ಆಗಿಲ್ಲವೆಂದು ಹೇಳುತ್ತಿದ್ದೇವೆ ಎಂದು ಹೇಳಲಿಕ್ಕೆ ನಾನು ಎದ್ದಿದ್ದು ನಿಜ. ಮತ್ತೆ ನಾನು ಅವರಿಗೆ ಅಂದಿರುವುದು ನಿಜ I stand. ನಾನು ** ಆ ಪದವನ್ನು ಖಂಡಿತ ಬಳಸಿಲ್ಲ. ಆಕಸ್ಮಾತ್ ನಾನು ಹಾಗೆ ಹೇಳಿದ್ದರೆ ಅದನ್ನು ನನ್ನ ತಪ್ಪು ಎಂದು ನಾನು ಒಪ್ಪಿಕೊಳ್ಳುತ್ತೇನೆ. ನಾನು ಅಷ್ಟು ಸಣ್ಣತನಕ್ಕೆ ಇಳಿಯಲಿಕ್ಕೆ ತಯಾರಿಲ್ಲ. ನಾನು ದೇಶಪಾಂಡೆಯವರಿಗೆ ಹೇಳಿದ್ದನ್ನು ಈಗಲೂ ಹೇಳಿದ್ದೇನೆ

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಎಂದು ಒಪ್ಪಿಕೊಳ್ಳುತ್ತೇನೆ. ನಾನು ಹೇಳಿದಾಗ, ನೀವೆಲ್ಲಾ ಉದ್ರೇಕಕ್ಕೆ ಒಳಗಾಗುತ್ತೀರಿ ಎಂಬುದು ನನಗೂ ಗೊತ್ತಿಲ್ಲ. ಇಷ್ಟು ಸಂಖ್ಯೆಯಲ್ಲಿ ನಾವು ಇದ್ದೇವೆ....

(ಗೊಂದಲ)

ನಾನು ಹೇಳಿಲ್ಲ. ನಾನು ನನ್ನ ತನ ಉಳಿಸಿಕೊಳ್ಳುವುದಕ್ಕೆ I stand. ನಾನು ಎಲ್ಲರಿಗೂ ತಪ್ಪು ಎಂದು ಈ ಸಭೆಯಲ್ಲಿ ಹೇಳಿದ್ದೇನೆ. ಅದು ನನ್ನ ಉದ್ದೇಶ ಆಗಿರಲಿಲ್ಲ. ಮತ್ತು ** ನನ್ನ ತಲೆಯಲ್ಲೂ ಇಲ್ಲ, ನನ್ನ ಮನಸ್ಸಿನಲ್ಲೂ ಬರುವುದಕ್ಕೆ ಸಾಧ್ಯವಿಲ್ಲ. ಅವರಿಗೂ ನಾನು ಹೇಳುತ್ತಿರಲಿಲ್ಲ. ನಾನು ಹಾನೆಸ್ಟ್ ಆಗಿ ಹೇಳುತ್ತೇನೆ. ಅವರು ಎದ್ದು, He wanted to clear himself off. ಈ ಸನ್ನಿವೇಶ ಉಪಯೋಗಿಸಿಕೊಂಡು ಮಾನ್ಯ ದೇಶಪಾಂಡೆಯವರು, ನಾನು ಏನೂ ಇಲ್ಲವೆಂದು ಪ್ರೂವ್ ಮಾಡುವುದಕ್ಕೆ ಹೊರಡಬಾರದಾಗಿತ್ತು ಎಂಬುದು ನನ್ನ ಅಭಿಪ್ರಾಯ. It is a different issue. ನಿಜವೋ ಸುಳ್ಳೋ, ನಾನು ಸರಿಯೋ ಅವರು ಸರಿಯೋ ಅದೆಲ್ಲಾ ಮುಂದಿನ ಕಾಲ ತೀರ್ಮಾನ ಮಾಡಲಿ. ಈ ಸಭೆಯಲ್ಲಿ ನಾನು ನಿರ್ದೋಷಿ ಅನ್ನಿಸಿಕೊಳ್ಳುವುದಕ್ಕೆ, ನನ್ನ ಮೇಲೆ ಇವರು ಮಾಡುವ ಆಪಾದನೆಗಳೆಲ್ಲಾ ಸುಳ್ಳು ಎಂದು ಪ್ರೂವ್ ಆಗಿಲ್ಲ; ನಾವು ಎಲ್ಲೂ ಹೇಳಿಲ್ಲ. ಯಾವುದೇ ಹೈಕೋರ್ಟ್ ಮುಂದಾಗಲೀ, ಸುಪ್ರೀಂ ಕೋರ್ಟ್ ಮುಂದಾಗಲೀ ಈ ವರೆಗೆ ದೇಶಪಾಂಡೆಯವರ ಮೇಲೆ ವೈಯಕ್ತಿಕವಾಗಿ ಕೇಸ್ ಹಾಕಿಲ್ಲ. I have challenged the Government. I have challenged the Hon'ble Officers and Ministers who were holding the post. ಇಂಡಿವಿಜ್ಯುಯಲ್ ಆಗಿ ನಾನು ಯಾರ ಮೇಲೂ ಕೇಸ್ ಹಾಕಿಲ್ಲ. ಇಂಡಿವಿಜ್ಯುಯಲ್ ಆಗಿ ನನ್ನ ಮೇಲೆ ಕೇಸ್ ಹಾಕಿದ್ದಾರೆ ಎಂದಾಗ ನನಗೂ ರೇಗಿ ಹೋಯಿತು. ನಾನು ಹಾಕಿಲ್ಲ. Let him prove. ನಾನು ವೈಯಕ್ತಿಕವಾಗಿ ಅವರ ಮೇಲೆ ಕೇಸ್ ಹಾಕಿದ್ದಿದ್ದರೆ, yes, he has a case to defend. ಸರ್ಕಾರದ ಮೇಲೆ ಕೇಸ್ ಹಾಕಿದ್ದೆ; ನಾನು ಕೇಸ್ ಹಾಕಿದ್ದ ಕಾಲದಲ್ಲಿ ಅವರ ಪುಣ್ಯಕ್ಕೋ ಅಥವಾ ಅವರ ಗ್ರಹಚಾರಕ್ಕೋ ಅವರು ಇಂಡಸ್ಟ್ರೀಸ್ ಮಿನಿಸ್ಟರಾಗಿದ್ದರು. He was made the party before the Court. ಪ್ರಕಾಶ್‌ರವರೂ ಪಾರ್ಟಿ, (**) ಪಾರ್ಟಿ. ಹಾಗಾದರೆ, ನಾನು ಎಲ್ಲಾದರೂ ಹೇಳಿದ್ದೇನೆಯೇ? ನನಗೆ ಅನಿವಾರ್ಯ ಆಗಿತ್ತು. ನಾನು 28–30 ಜನಕ್ಕೆ ನೋಟೀಸ್ ಸರ್ವ್ ಮಾಡಿಸಲೇ ಬೇಕಾಗಿತ್ತು.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅಲ್ಲಿ ಇಲ್ಲ. ನೀವು ಸುಮ್ಮನೆ ಅಸೆಂಬ್ಲಿಯನ್ನು ಉಪಯೋಗಿಸಿಕೊಂಡು ನಾಳೆ ಪೇಪರಿನಲ್ಲಿ ಬರಲಿ ಎಂಬುದು ಬೇಡ. Where is it that I am there as a party, and nothing has happened when I was the Industries Minister.

ಶ್ರೀ ಜೆ.ಸಿ. ಮಾಧುಸ್ವಾಮಿ: ಹಾಗಲ್ಲ. Sorry, ನಾನು respect ನಲ್ಲಿ ಹೇಳಿಲ್ಲ. ಆಯಿತು ಬಿಡಿ.

Sri P.G.R. Sindhia: Why are you taking my name? You cannot take my name like that. Sri Madhu Swamy, I request you to yield. ಮಾನ್ಯ ಅಧ್ಯಕ್ಷರೆ, ಇದೆಲ್ಲಾ ಏನಾಗುತ್ತದೆಂದು ಹೇಳಿದರೆ, "Caesar's wife should be above suspicion," ಎನ್ನತಕ್ಕಂಥ ಒಂದು ನಾಣ್ಣುಡಿ ಇದೆ. ಇಂಗ್ಲೀಷ್‌ನಲ್ಲಿ ನಾವೆಲ್ಲಾ ಇಲ್ಲಿ ಕುಳಿತುಕೊಂಡಿರತಕ್ಕಂಥದ್ದು ಗೌರವಕ್ಕೋಸ್ಕರ. ಇವರಿಗೆ ಹೇಗೆ ಗೌರವ, ಮಾನ, ಮರ್ಯಾದೆ ಇದೆ ಹಾಗೆಯೇ ಬೇರೆಯವರಿಗೂ ಇದೆ. ** Why is he taking my name? What will happen tomorrow in the press? While I was the Industries Minister, he was not there. He was defeated. I was the leader of J.D. (U) at that time from that side when BMIC happened. Where my name has appeared in the Supreme Court or in the High Court? It is not so. Why is he taking my name? You must kindly remove it.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾನು ನಿಮ್ಮ ಮೇಲೆ ಹಾಕಲಿಲ್ಲವೆಂದು ಹೇಳುವುದಕ್ಕೆ ಹೊರಟಿದ್ದನ್ನು ಈಗ ನಾನು ಹೇಳುತ್ತೇನೆ. ಆ ಅವಧಿಯಲ್ಲಿ ನಾನು ಎಂ.ಎಲ್.ಎ. ಅಲ್ಲ. That is my stand. ಆ ಅವಧಿಯಲ್ಲಿ ನಾನು ಎಂ.ಎಲ್.ಎ. ಆಗಿದ್ದಿದ್ದರೆ, ನಾನು ಹೈಕೋರ್ಟ್ ಮುಂದೆ ಹೋಗುವುದಕ್ಕೂ ಆಗುತ್ತಿರಲಿಲ್ಲವೆಂಬುದೇ ನನ್ನ ಸ್ಟ್ಯಾಂಡ್. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆದರೆ, ಈ ಸರ್ಕಾರ ಬಂದ ಮೇಲೆ ನಾನು ಕೇಸ್ ಹಾಕಿದ್ದು. ತಾವು ತಪ್ಪು ತಿಳಿದುಕೊಳ್ಳಬೇಡಿ. ಈ ಸರ್ಕಾರ ಬಂದ ಮೇಲೆ ಕೇಸ್ ಹಾಕಿದಾಗ, ಆಯಾ ಇಲಾಖೆಯಲ್ಲಿ ಇದ್ದವರೆಲ್ಲರಿಗೂ ನೋಟೀಸ್ ಸರ್ವ್ ಮಾಡಬೇಕಾದ ಸ್ಥಿತಿ ಕೋರ್ಟ್‌ನಲ್ಲಿ ನಿರ್ಮಾಣವಾದರೆ, ಅವರೆಲ್ಲಾ ತಪ್ಪಿತಸ್ಥರು ಅಲ್ಲವೆಂದೇ ನಾನು

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಹೇಳುತ್ತಾ ಇರುವುದು. ನಾನು ಈ ಸರ್ಕಾರ ಬಂದಮೇಲೆ ಕೇಸ್ ಹಾಕಿರುವುದು, ಹಿಂದಿನ ಸರ್ಕಾರದವರ ಮೇಲೆ ಅಲ್ಲ Just because, ನಿಮ್ಮನ್ನು ಅಕ್ಯೂಸ್ಡ್ ಮಾಡಿದ್ದೇವೆಂದು ಅಲ್ಲ. You have to be given some notice ಆ ಪೋಸ್ಟ್‌ನ್ನು ಇಟ್ಟುಕೊಂಡಿದ್ದಿರಿ. ಆ ಪೋಸ್ಟ್‌ನಲ್ಲಿ ಇದ್ದವರಿಗೆ ನೋಟೀಸ್ ಕೊಟ್ಟರೆ, ಅವರೆಲ್ಲರೂ ಕಲ್ಪ್ರಿಟ್ಸ್ ಅವರೆಲ್ಲಾ ಅಪರಾಧಿಗಳು, ಕೋರ್ಟ್‌ನಲ್ಲಿ ಹೆಸರು ಬಂದಾಕ್ಷಣಕ್ಕೇ ಅಪರಾಧಿಗಳು ಎಂದು ಭಾವನೆ ಮಾಡಿಕೊಂಡು ಇಲ್ಲಿ ಮಾತನಾಡುತ್ತಾ ಇಲ್ಲ, ಆ ಉದ್ದೇಶವೂ ನನಗಿಲ್ಲ. ನಾವು ಒಂದೇ ಕೇಸು. ಅವನಿಗೆ ಕೊಟ್ಟಿರುವ ಹೆಚ್ಚುವರಿ ಲ್ಯಾಂಡನ್ನು ವಾಪಸ್ ಕೊಡಿ ಎನ್ನುವುದನ್ನು ಬಿಟ್ಟರೆ, ನಾನು ಯಾರನ್ನೂ ಪಾರ್ಟಿ ಮಾಡಿಲ್ಲವೆಂದೇ ಹೇಳುತ್ತಿರುವುದು. ನಾನು ಯಾರನ್ನೂ ಇಂಡಿವಿಜ್ಯುಯಲ್ ಆಗಿ ಅಕ್ಯೂಸ್ಡ್ ಮಾಡಿಲ್ಲವೆಂದೇ ಹೇಳುತ್ತಿರುವುದು. ಮಾನ್ಯ ಸಿಂಧ್ಯಾರವರು ಏಕೆ ಆ ರೀತಿ ತಿಳಿದುಕೊಂಡರೋ ಗೊತ್ತಿಲ್ಲ. ನಾನು ಯಾರನ್ನೂ ಅಕ್ಯೂಸ್ ಮಾಡಿಲ್ಲ. I am very specific. ನಾನು ಯಾರ ಮೇಲೂ ಅಲಿಜ್ ಮಾಡಿಲ್ಲ. I have alleged the whole government

for entering into such an agreement and giving away the excess land to a company other than the road works. ಆ ಕಂಪನಿಯವನು ರೋಡನ್ನು ಬಿಟ್ಟು, ನೈಟ್ ಮಾಡಿ ಮಾರುವುದನ್ನು ಏತಕ್ಕೆ ಮಾಡುತ್ತಿದ್ದಾನೆ ಎಂಬುದನ್ನೇ ನಾನು ಅವತ್ತೂ ಮಾತನಾಡಿರುವುದು ಮತ್ತು ಇವತ್ತೂ ಮಾತನಾಡುವುದು. ಇಂಡಿವಿಜ್ಯುಯಲ್ ಆಗಿ ಸನ್ಮಾನ್ಯ ದೇಶಪಾಂಡೆಯವರಿಂದ ಹಿಡಿದು, ತಮ್ಮವರೆಗೆ ನಾನು ಯಾರಿಗೂ ವೈಯಕ್ತಿಕವಾಗಿ ಅಲಿಜ್ ಮಾಡಿಲ್ಲ. ಅದು ನನ್ನ ಉದ್ದೇಶವೂ ಅಲ್ಲ. ಆದರೆ, ದೇಶಪಾಂಡೆಯವರು ಇಲ್ಲಿ ಹೇಳಿದರು. 'I have been cleared.' ಯಾರು ಅಲೆಜ್ ಮಾಡಿದ್ದರು, ಯಾರು ಪಿಟಿಷನರ್ಸ್ ಇದ್ದರು, ಅವರೇ ಇವತ್ತು ಒಪ್ಪಿಕೊಳ್ಳುತ್ತಿದ್ದಾರೆ, ನಾನು ತಪ್ಪಿತಸ್ಥನಲ್ಲವೆಂದು. That is where I came to picture. ನಾವು ಮಾಡಿಯೇ ಇಲ್ಲ ನಿಮ್ಮನ್ನು ಇಂಡಿವಿಜ್ಯುಯಲ್ ಆಗಿ ನಾನು ಮಾಡಿದ್ದೇನೆಂದು ಹೇಳಿಯೇ ಇಲ್ಲ. ಹೌದು ಅವರು ಹೇಳಿದ್ದನ್ನು ಕೇಳಿದೆ. ನಾನು ಇಲ್ಲ ಎಂದು ಹೇಳುವುದಿಲ್ಲ. How can he say before the House? ಅವರಾಗಿಯೇ ಎದ್ದು ನಾನು ತಪ್ಪಿತಸ್ಥನಲ್ಲ, ಪಿಟಿಷನರೇ ಕ್ಲಿಯರ್ ಮಾಡುತ್ತಾ ಇದ್ದಾರೆ ನಾನು ತಪ್ಪಿತಸ್ಥನಲ್ಲವೆಂದು I am very happy, ಎಂಬ ಪದ ಬಳಸಿದ್ದಕ್ಕೆ ನಾನು ಮಾತನಾಡಿದೆ. ನಾವು ಅಲೆಜ್ ಮಾಡಿರಲಿಲ್ಲ. ಅವರು ವಿಷಯವನ್ನು

ಎತ್ತಿದ್ದಕ್ಕೆ ** ಮತ್ತೆ ನಾನು ಒತ್ತಿ ಹೇಳುತ್ತೇನೆ. ನಾನು ಯಾವುದೇ ಸದಸ್ಯರ ಮೇಲೆ ರಿಮಾರ್ಕ್ಸ್‌ನ್ನು ಪಾಸ್ ಮಾಡುವ ಸ್ಥಿತಿ ಇರಲಿಲ್ಲ. ನಾನು ಎದ್ದಿರಲೂ ಇಲ್ಲ, ನಾನು ಮಾತನಾಡಿರಲ್ಲೂ ಇಲ್ಲ. ಅವರು ಎದ್ದು, ಸ್ಟ್ರಿಕ್ಚರ್ಸ್ ಪಾಸ್ ಮಾಡಿದೆ, ದಂಡ ಹಾಕಿದೆ, ಅವರೇ ಇವತ್ತು ನನ್ನ ಕ್ಲಿಯರ್ ಮಾಡುತ್ತಾರೆ I am very happy ಅಂದಾಗ At least, ಶ್ರೀರಾಮರೆಡ್ಡಿಯವರೇ ಒಪ್ಪಿಕೊಳ್ಳುತ್ತಾ ಇದ್ದಾರೆ, ನಾನು ಯಾವುದೂ ಕರೆಪ್ಷನ್‌ನಲ್ಲಿ ಇನ್‌ವಾಲ್ವ್ ಆಗಿಲ್ಲ, ಏನೋ ಪೇಪರಿನಲ್ಲಿ ಬಂದ ರಿಮಾರ್ಕ್ಸ್‌ಗೆ ಅವರು ಹೇಳಿದ್ದಕ್ಕೆ ನಾನು ಹೇಳಬೇಕಾಯಿತು. ನನ್ನ ಬಗ್ಗೆ ಸನ್ಮಾನ್ಯ ಖರ್ಗೆಯವರು ಒಳ್ಳೆಯ ಮಾತನಾಡಿದರು. ಅಷ್ಟೇ ಸತ್ಯ, ನಾನು ಅವರ ಬಗ್ಗೆಯೂ ಕೇಳುತ್ತೇನೆ. ಒಂದು ನಿಲುವಳಿ ಸೂಚನೆ ಮೂವ್ ಆಗುವಾಗ, ಯಾರಾದರೂ ಒಂದು ನಿಲುವಳಿ ಸೂಚನೆಯನ್ನು ತಂದಾಗ, ಮಧ್ಯೆ ಪ್ರವೇಶ ಮಾಡುವುದು, ಇದನ್ನು ದಿಕ್ಕು ತಪ್ಪಿಸುವುದು, ಆಮೇಲೆ ನಮ್ಮನ್ನೆಲ್ಲಾ ತಪ್ಪಿತಸ್ಥರನ್ನು ಮಾಡುವುದು, ಆಮೇಲೆ ನಾವು ಧರಣಿ ಮಾಡುತ್ತೇವೆ ಎನ್ನುವುದು, ಈ ಪ್ರಾಕ್ಟೀಸಸ್ ಸದನದಲ್ಲಿ ನಡೆಯಬಹುದೇ ಸ್ವಾಮಿ? Whatever he wanted to say, ನಾನು ಕೇಳುತ್ತಾ ಇರುವುದು. ತಾವು ಶ್ರೀರಾಮರೆಡ್ಡಿಯವರಿಗೆ ಕರೆದಿದ್ದಿರಿ. ಶ್ರೀರಾಮರೆಡ್ಡಿಯವರು ಪ್ರಿಲಿಮನರಿ ಬ್ರೀಫಿಂಗ್ ಕೊಡುವುದಕ್ಕೆ ನಿಂತಿದ್ದರು. He should have been allowed to say whatever he wants to say. ಪ್ರಿಲಿಮಿನರಿ ಬ್ರೀಫಿಂಗ್‌ನಲ್ಲಿ ಇಂಟರ್‌ಫಿಯರ್ ಆಗಿದ್ದು ನಾನು ಇವತ್ತೇ ನೋಡಿದ್ದು. ಈ ಸಭೆಯಲ್ಲಿ ನಾನು ಇವತ್ತೇ ನೋಡಿದ್ದು. ಸರ್ಕಾರದವರು ಹೇಳಬಹುದು, ರಿಜೆಕ್ಟ್ ಮಾಡಿ, ಇದಕ್ಕೆ ಕಾರಣ ಇಲ್ಲ ಎಂದು. ಆದರೆ, ಇಲ್ಲಿ ಎಲ್ಲಾರೂ ಮಾತನಾಡುವುದೇ. ಪ್ರಿಲಿಮನರಿ ಬ್ರೀಫಿಂಗ್‌ಗೂ ಮಾತನಾಡುವುದೇ, ನಿಲುವಳಿ ಸೂಚನೆಗೆ ನೀವು ಅಲೋ ಮಾಡಿದ್ದರೋ ಇಲ್ಲವೋ, ನಿಲುವಳಿ ಸೂಚನೆಯನ್ನು ತೆಗೆದುಕೊಂಡಿದ್ದಿರೋ, ರೂಲ್ 69ಕ್ಕೆ ಬದಲಾವಣೆ ಮಾಡುತ್ತಿದ್ದಿರೋ ನಾವು ಇಲ್ಲಿ ಕುಳಿತುಕೊಂಡು ಕಾಯುತ್ತಿದ್ದೇವೆ. If everyone want to take shelter under that, ನಾವು ಮಾತನಾಡಲೇ ಬೇಕು. "ಹೌದು" ಮಾತನಾಡಲೇ ಬೇಕಲ್ಲಾ. ನಮ್ಮ ಹೆಸರು ಬಳಸಿದ್ದಕ್ಕೆ, ನಾನು ಇವರನ್ನು ಪಿಟಿಷನರ್ ಆಗಿ ಇವರ ಮೇಲೆ ಕೇಸ್ ಹಾಕಿದ್ದೇವೆ ಎನ್ನುವ ಪದ ಬಳಸಿದ್ದಕ್ಕೆ ನಾನು ಎದ್ದು ಮಾತನಾಡಿದ್ದು ನಾನು ಹಾಕಿಲ್ಲ ಎಂದು ಹೇಳುತ್ತಾ ಇರುವುದು.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಇಂಡಿವಿಜ್ಯುಯಲ್ ಆಗಿ, ನಾನು ಯಾರನ್ನೂ ಚಾರ್ಜ್ ಮಾಡಿಲ್ಲವೆಂದು ಸ್ಪಷ್ಟವಾಗಿ ಹೇಳುವುದಕ್ಕೆ ಎದ್ದು ನಿಂತಿರುವುದು. ಎರಡನೆಯದು, I will make it myself clear. ನನಗೆ ಯಾವ ದಂಡವನ್ನೂ ಕೋರ್ಟ್ ಹಾಕಿಲ್ಲ. ಆ ಪಿಟಿಷನ್‌ಗೆ ಕಾಸ್ಟ್ ಅವಾರ್ಡ್ ಆಗಿದೆ. ಆ ಪಿಟಿಷನ್ resjudicata ಎಂದು ಆಗಿದೆ. I am very proud and happy. ಆ ಕೋರ್ಟ್ ತೀರ್ಮಾನ ಫ್ರೇಮ್ ವರ್ಕ್ ಅಗ್ರಿಮೆಂಟ್‌ಗೆ ಕನ್‌ಫೈನ್ ಆಗಿದೆ ಎಂದು ಆಗಿದೆ. ಫ್ರೇಮ್‌ವರ್ಕ್ ಅಗ್ರಿಮೆಂಟ್ ಆದಮೇಲೆ ಆಗಿರತಕ್ಕ ಘಟನಾವಳಿಗಳನ್ನೇ ನಾವು ಈ ಸಭೆಯಲ್ಲಿ ಪ್ರಶ್ನೆ ಮಾಡಿರುವುದು. ಅದೇ ಇಲ್ಲಿ ಮತ್ತೆ ಚರ್ಚೆಯಾಗಬೇಕಾಗಿರುವುದು. ಫ್ರೇಮ್‌ವರ್ಕ್ ಅಗ್ರಿಮೆಂಟನ್ನು ಬಿಎಂಐಸಿ, ನೀವು ಅವರ ಜೊತೆ ಮಾಡಿಕೊಂಡ ಎಂ.ಓ.ಯು. ಅನ್ನು ಯಾವತ್ತೂ ಈ ಸಭೆಯಲ್ಲಿ ನಾವು ಪ್ರಶ್ನೆ ಮಾಡಿಲ್ಲ. ನನಗೆ ಸ್ಮೃತಿ ಚೆನ್ನಾಗಿದೆ. ಫ್ರೇಮ್ ವರ್ಕ್ ಅಗ್ರಿಮೆಂಟ್ ಆದಮೇಲೆ ಸರ್ಕಾರದ ಮಟ್ಟಗಳಲ್ಲಿ ಸಭೆಯಾಯಿತು. ಬೇರೆ ಬೇರೆ ನಿರ್ಣಯ ಆಯಿತು. BMIC MOU ಅದನ್ನು ನಾವು ಪ್ರಶ್ನೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ಖರ್ಗೆಯವರು ಏನು ಹೇಳಿದ್ದಾರೆ. ** ಅದರ ಬಗ್ಗೆ ವಿಷಾದ, ಅದನ್ನು ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಮಾಧುಸ್ವಾಮಿಯವರು ಮಾತನಾಡುವ ವೇಳೆಗೆ ಪ್ರಾರಂಭದಲ್ಲಿ ಒಂದು ಮಾತು ಹೇಳಿದರು ಮತ್ತೆ ಕನ್‌ಕ್ಲೂಡ್ ಮಾಡುವಾಗ ಒಂದು ಮಾತನ್ನು ಹೇಳಿದರು. ಒಂದು ನಿಲುವಳಿ ಸೂಚನೆಯನ್ನು ತಂದಾಗ ಅದನ್ನು ಚರ್ಚೆ ಮಾಡುವುದಕ್ಕೆ ಆಗದೇ ಇರತಕ್ಕ ಸ್ಥಿತಿಯನ್ನು ನಿರ್ಮಾಣ ಮಾಡಿದರು ಎಂದು ಹೇಳಿದರು. ಮತ್ತೆ ಕನ್‌ಕ್ಲೂಡ್ ಮಾಡುವಾಗ ಹೇಳಿದರು, ಖರ್ಗೆಯವರನ್ನೂ ರೆಫರ್ ಮಾಡುತ್ತಾ ಎಲ್ಲೋ ಒಂದು ಕಡೆಗೆ ಈ ಚರ್ಚೆಗೆ ದಿಕ್ಕು ತಪ್ಪಿಸತಕ್ಕ ಪ್ರಯತ್ನ ಮಾಡಿದರು ಎಂದು. ಇದು ಏನು ಮೀನಿಂಗ್ ಕನ್ವೆ ಮಾಡುತ್ತೆ ಎಂದರೆ, ಈ ಬಿ.ಎಂ.ಐ.ಸಿ. ದೊಡ್ಡ ಸ್ಕ್ಯಾಂಡಲ್. ಅದರಲ್ಲಿ ಕಾಂಗ್ರೆಸ್ ಪಕ್ಷ ಇಂಟರೆಸ್ಟೆಡ್ ಪಾರ್ಟಿ. ಅದಕ್ಕೆ ಇವರ ದಿಕ್ಕು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ ನಿಲುವಳಿ ಸೂಚನೆ ಮೇಲೆ ಪ್ರಸ್ತಾಪ ಆಗುವುದನ್ನು ತಪ್ಪಿಸುವುದಕ್ಕೆ ಮಾಡುತ್ತಿದ್ದಾರೆ ಎಂದು. ಒಂದು ಮಾತು ಹೇಳುತ್ತೇನೆ. ನಿಜ ನಾವು ಕಾಂಗ್ರೆಸ್‌ನವರು ಇಲ್ಲ ಎಂದಲ್ಲ. ಕಾಂಗ್ರೆಸ್ಸನ್ನು ಪ್ರೀತಿ ಮಾಡುವುದು ನಿಜ. ಆದರೆ, ಈ ದೇಶವನ್ನು ಕಾಂಗ್ರೆಸ್ಸಿಗಿಂತ ಜಾಸ್ತಿ ಪ್ರೀತಿಸುತ್ತೇವೆ.

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇತಿಹಾಸಕ್ಕೆ ಆಮೇಲೆ ಹೋಗೋಣ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್ : ಒಂದು ನಿಮಿಷ, ಅವರು ನನ್ನನ್ನು ಕರೆದಿದ್ದಾರೆ, ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಪ್ಪಾಗಿದೆ ಎಂದು ಕೊನೆಯಲ್ಲಿ ಮಾತನಾಡಿದಾಗ ಮುಗಿಯಿತು. ನಾನು ನಿಮಗೆ ಕೈಮುಗಿಯುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ, ನಿಮಗೆ ಎರಡು ನಮಸ್ಕಾರ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಕುಳಿತುಕೊಳ್ಳತಕ್ಕ ಪ್ರಶ್ನೆಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಮೇಶ್ ಕುಮಾರ್‌ರವರೇ, ನಿಮ್ಮ ಬಗ್ಗೆ ನಮಗೆ ಗೌರವ ಇದೆ. ಯುದ್ಧ ಮಾಡುವುದಕ್ಕೆ ಹೋಗಬೇಡಿ. ಈ ಚರ್ಚೆಯನ್ನು ಇಲ್ಲಿಗೆ ನಿಲ್ಲಿಸೋಣ. ಇದನ್ನು ಬೆಳೆಸುವುದಕ್ಕೆ ಹೋಗಬೇಡಿ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೇ, ಅವರು ಏನು ಹೇಳುತ್ತಾರೆ ಕೇಳೋಣ. ಆಮೇಲೆ ಬೇಕಾದರೆ ನೀವು ಹೇಳಿ. ನಿಮ್ಮ ನಾಯಕರು ಮಾತ ನಾಡುತ್ತಾರೆ, ಎಲ್ಲರೂ ಕುಳಿತು ಕೊಳ್ಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಾನು ಕುಳಿತುಕೊಳ್ಳುವುದಿಲ್ಲ. ನಾನು ಹೆಚ್ಚು ಬೆಳೆಸುವುದಿಲ್ಲ. ನನ್ನ ಮಾತನ್ನು ಪೂರ್ತಿಯಾಗಿ ಕೇಳಿ.

ಗೊಂದಲ

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಇಷ್ಟೇ ಹೇಳುತ್ತೇನೆ. ಆಡಳಿತ ನಡೆಸುವ ವೇಳೆಗೆ ಈ ದೇಶದ ವ್ಯವಸ್ಥೆಯೊಳಗೆ ಅವಕಾಶ ಸಿಕ್ಕಾಗ ಕೆಲವರು ಅಧಿಕಾರ ದುರುಪಯೋಗ ಮಾಡುವ ಪ್ರವೃತ್ತಿ ಹೊಂದಿರುವವರು ಇರಬಹುದು, ಮಾಡದೇ ಇರುವವರು ಇರಬಹುದು ಕೆಲವರು ಅವಕಾಶ ವಂಚಿತರು, ಕೆಲವರು ಅವಕಾಶ ಬಂದಾಗಲೂ ಪ್ರಾಮಾಣಿಕರಾಗಿ ಇರುತ್ತಾರೆ, ಕೆಲವರು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಯಾರು ಉಪ್ಪು ತಿಂದಿರುತ್ತಾರೆ ಅವರು ನೀರು ಕುಡಿಯುತ್ತಾರೆ. ತಪ್ಪು ಮಾಡಿದವರನ್ನೆಲ್ಲಾ ಡಿಫೆಂಡ್ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ನಾವು ಸಾರ್ವಜನಿಕ ಜೀವನದಲ್ಲಿ ಇಲ್ಲ. ಆದರೆ ಅಂತಹ ಉದ್ದೇಶ ಯಾರಿಗೂ ಇಲ್ಲ. ಆದರೆ ನಾವು ಯಾವ ವಿಷಯವನ್ನು ಮೊದಲನೇ ದಿವಸ ತಂದಿದ್ದೆವು ನಮ್ಮ ಅಭಿಪ್ರಾಯಗಳು, ರಾಜ್ಯದ ಮುಖ್ಯಮಂತ್ರಿಯಾಗಿದ್ದಂತಹವರು ಇಂತಹ ಹೇಳಿಕೆಯನ್ನು ಕೊಟ್ಟಿದ್ದರು ಅಂತ ಅದು ಪ್ರಮುಖವಾಗಿ ಇರುವ ವಿಷಯ ಅಂತ

ಹೇಳಿ ಪ್ರಸ್ತಾಪ ಮಾಡಿದ್ದು ಹೌದು. ಅದಕ್ಕೆ ಬೇರೆ ರೀತಿಯ ಅರ್ಥ ಕಲ್ಪಿಸತಕ್ಕಂಥ ಪ್ರಯತ್ನ ಆಗಿದೆ ಎನ್ನುವ ಅಭಿಪ್ರಾಯ ಬರಬಾರದು. ಅವರು ಮಾಡಿದ್ದಾರೆ ಎನ್ನುವುದೂ ಕೂಡ ನಾನು ಹೇಳುವುದಿಲ್ಲ. That may be even more clear. ಮಾನ್ಯ ವಾಟಾಳ್‌ರವರು ಹೇಳಿದ ಹಾಗೆ, ನಾನು ಅದನ್ನು ಬೆಳೆಸುವುದಕ್ಕೂ ಇಷ್ಟಪಡುವುದಿಲ್ಲ. ಆದರೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು ನನಗೆ ಆ ಅಭಿಪ್ರಾಯ ಇಲ್ಲ ಅಂತ. ಮಾನ್ಯ ಮಾಧುಸ್ವಾಮಿಯವರು ಕಳೆದ ಅಧಿವೇಶನದಲ್ಲಿ ಬಿ.ಎ.ಸಿ.ಯಲ್ಲಿ ಏನೋ ಒಂದು ಒಪ್ಪಂದ ಆಯಿತು ಅಂತ ಹೇಳಿದಾಗ ನಾನು ಮಾನ್ಯ ಮಾಧುಸ್ವಾಮಿಯವರು ಹೇಳಿದ ಮೇಲೆ ನಾನು ಒಪ್ಪಿಕೊಳ್ಳುತ್ತೇನೆಂದು ಹೇಳಿ ಒಪ್ಪಿಕೊಂಡೆ. That is the respect we have got. ನಾವು ಇಲ್ಲಿ ಕಲಾಪವನ್ನು ನಡೆಸುವ ವೇಳೆಗೆ ನಮ್ಮ ಸ್ನೇಹಿತರಾದ ಮಾನ್ಯ ಶ್ರೀರಾಮರೆಡ್ಡಿಯವರು ನಿಯಮಾವಳಿಗಳನ್ನು ತೆಗೆದು ನೋಡಿ. ಯಾವ ಆರ್ಡರ್‌ನ್ನು ನಾವು ಒಬ್ಬ ಸದಸ್ಯ ತಾನು ಭಾಷಣ ಮಾಡುವಾಗ ಮೈನ್‌ಟೇನ್ ಮಾಡಬೇಕು ಎನ್ನತಕ್ಕಂಥಾದ್ದು ಇದೆ. Insinuation ಮಾಡಬಾರದು. Sarcastic ಆಗಿ ಇರಬಾರದು. ಟ್ರಿಬ್ಯುನಲ್ ಮುಂದೆ, ಕೋರ್ಟ್ ಮುಂದೆ ಮತ್ತೊಂದು ಅಂತ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಒಂದು ಪೇಪರ್ ಕಟಿಂಗ್‌ನ್ನು ಇಟ್ಟುಕೊಂಡು ಅದು ಅವರದ್ದೇ ಆದಂತಹ ಪೇಪರ್ ಅಂತ ಇಟ್ಟುಕೊಳ್ಳೋಣ. ಅದು ಸಣ್ಣ ಪೇಪರ್ ಅಥವಾ ದೊಡ್ಡ ಪೇಪರ್ ಅದರ ಬಗ್ಗೆಯೂ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ** ಆ ಪೇಪರ್‌ನಲ್ಲಿ ಹೀಗೆ ಹೇಳಿದ್ದಾರೆ ಅಂತ ಹೇಳಿ insinuation ಮಾಡತಕ್ಕಂಥ intelligent mischief ಏನು ಮಾಡಿದಿರಿ, please don't think you are This is my appeal to the Chair. Yes. If this is permitted. ಸಾರ್, ನಾಳೆಯಿಂದ ಬೀದಿ ಬೀದಿಯಲ್ಲಿ ಸಿಗತಕ್ಕಂಥ ಹಾಳೆ ಹಾಳೆ ತೆಗೆದುಕೊಂಡು ಬರುತ್ತೇವೆ. ಯಾರ್ಯಾರು ಎಲ್ಲಿ ಎಲ್ಲಿ ಏನೇನು ಬರೆದಿರುತ್ತಾರೋ ಅವೆಲ್ಲವನ್ನೂ ತೆಗೆದುಕೊಂಡು ಬರಬೇಕಾಗುತ್ತದೆ ಅವುಗಳನ್ನೆಲ್ಲಾ ಇಟ್ಟುಕೊಂಡು ಅವುಗಳ ಬಗ್ಗೆನೇ ಚರ್ಚೆ ಮಾಡಬೇಕಾಗುತ್ತದೆ. ಮಾನ್ಯ ಪ್ರಕಾಶ್‌ರವರು ಎದುರಿಗೆ ಇದ್ದಾರೆ. ಅವರು ಹೇಳಲಿ. ನಾನು ಹೇಳುತ್ತಿರುವಂತಹ ಮಾತಿನಲ್ಲಿ ಏನಾದರೂ ಸತ್ಯ ಇದೆಯೇ, ಇಲ್ಲವೇ ಅಂತ. ತಾತ್ಪರ್ಯ ಇದೆಯೇ ಇಲ್ಲವೇ ಅಂತ. ಅದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ನೋಟೀಸ್ ಕೊಡಿ. ಪ್ರೂಫ್ ಇದ್ದರೆ ಕೊಡಿ. ನಿರ್ದಿಷ್ಟವಾಗಿ ಇದ್ದರೆ ಬರೆದು ಕಳುಹಿಸಿ ಇವನು ಇಂತಹ 'Dirty politician' ಅಂತ who

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

2.00 PM

created opportunity for provocation? ಏಕೆ ವಾಟಾಳರೇ? ದಯಮಾಡಿ ಇದೆಲ್ಲಾ ಅಷ್ಟು ಸರಿ ಹೋಗುವುದಿಲ್ಲ. ನಾವು ಯಾರೂ ಪ್ರಾಮಾಣಿಕರಲ್ಲ. ಈ ವ್ಯವಸ್ಥೆ ಒಳಗೆ ಚುನಾವಣೆಗೆ ಅಪ್ಲಿಕೇಷನ್ ಹಾಕಿ ಅಫಿಡವಿಟ್ ಸ್ವೇರ್ ಮಾಡಿ ಇಷ್ಟೇ ಖರ್ಚು ಮಾಡುತ್ತೇವೆಂದು ಲೆಕ್ಕ ಕೊಟ್ಟು ಬಂದವರು, ಈ 224 ಜನ ನಾವು ದೊಡ್ಡ ಮನುಷ್ಯರೇ? ಕರೆಕ್ಟ್ ಆಗಿ ಲೆಕ್ಕ ಕೊಟ್ಟಿದ್ದೇವೆಯೇ ಖರ್ಚು ಮಾಡಿದ್ದು ಎಷ್ಟು ಅಂತ. ನಾವು ಪ್ರಾಮಾಣಿಕರೇ? ವ್ಯವಸ್ಥೆಯೇ ಹಾಳಾಗಿ ಹೋಗಿರುವಾಗ ಭ್ರಷ್ಟರಾಗಿರುವಾಗ ನಾವೇನು ಮಾಡುವುದು? ಇಡೀ ಸಮುದ್ರ ಕೊಳಕಾಗಿದೆ ಅದರ ಮಧ್ಯೆ ನಾವು ಈಜಾಡುತ್ತಿದ್ದೇವೆ. ಎಲ್ಲೋ ಅದರ ಕೊಳೆ ಸ್ವಲ್ಪ ನಮ್ಮ ಮೈಗೂ ಮೆತ್ತಿ ಕೊಂಡಿರಬಹುದು. ಆದ್ದರಿಂದ ಕೆಲವರು ಅವರಷ್ಟಕ್ಕೆ ಅವರು ಪ್ರಾಮಾಣಿಕರು ಅಂತ ಭಾವಿಸಿ ಕೊಳ್ಳುವುದಕ್ಕೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಆದರೆ ತಾವಷ್ಟು ಪ್ರಾಮಾಣಿಕರು, ಉಳಿದವರು ಗಲೀಜು ಕೊಳೆ ಮೆತ್ತಿಕೊಂಡಿರುವವರು ಅಂತ ಹೇಳುವಂತಹ ಮಾತು ಇದೆಯಲ್ಲಾ, ಇದನ್ನು ಯಾರೂ ಮಾಡಬಾರದು, ಆ ಒಂದು ಅಭಿಪ್ರಾಯ ಬರುವಂತೆ ಅವರು ಏನು ಮಾಡಿದ್ದಾರೆ ಅದಕ್ಕೆ ಒಂದು ಸ್ಪಷ್ಟೀಕರಣ ನಾನೊಬ್ಬ ಕಾಂಗ್ರೆಸ್ಸಿಗನಾಗಿ ಕೊಡಬೇಕಾಯಿತು. Congress is more interested in discussing BMIC, if not more as much as you are. ಒಂದು ವೇಳೆ ತಪ್ಪು ಇದ್ದರೆ ಬರಲಿ ಹೊರಕ್ಕೆ ಏನಂತೆ? ಒಬ್ಬರೋ, ಇಬ್ಬರೋ ಕಾಂಗ್ರೆಸ್ಸಿಗರು ತಪ್ಪು ಮಾಡಿದ್ದರೆ ಸಿಕ್ಕಿ ಹಾಕಿಕೊಂಡರೆ ಕಾಂಗ್ರೆಸ್ ಏನು ಮುಳಗಿ ಹೋಗುವುದಿಲ್ಲ. That is our stand. ಮತ್ತೆ ಹೇಳುತ್ತೇವೆ. ಸಾರ್, ನಮಗೆ ಸತ್ಯವನ್ನು ಬಚ್ಚಿಡತಕ್ಕಂಥ ಪ್ರಯತ್ನ, ಚರ್ಚೆಗೆ ದಿಕ್ಕು ತಪ್ಪಿಸತಕ್ಕಂಥ, ಪ್ರಯತ್ನ ಯಾರನ್ನೋ ಪ್ರೊಟೆಕ್ಟ್ ಮಾಡತಕ್ಕಂಥ, ಪ್ರಯತ್ನ ಅಥವಾ ಯಾವುದೋ ಉದ್ದಿಮೆಗೆ, ವಕಾಲತ್ತು ಹಿಡಿದುಕೊಳ್ಳತಕ್ಕಂಥ ದುರ್ಗತಿ ನಮಗೆ ಬಂದಿಲ್ಲ.

ಅಧ್ಯಕ್ಷರು: ಈಗ ಮುಕ್ತಾಯ ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಮಾನ್ಯ ರೆಡ್ಡಿಯವರು ನಿಲುವಳಿ ಸೂಚನೆಯನ್ನು ಮೂವ್ ಮಾಡಿದಾಗ ತಾವು ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೀರಿ. ನಾವೇನೂ ಅಡ್ಡ ಬರಲಿಲ್ಲ. ಯಾವಾಗ ಒಂದು ಪೇಪರ್ ತೆಗೆದುಕೊಂಡು ನನ್ನ ಹೆಸರು ಪ್ರಸ್ತಾಪ ಮಾಡಿದಾಗ, ನಾನು ಆಗ ಒಂದು ಎರಡು ಮಾತು

ಮಾತನಾಡಬೇಕಾಯಿತು. ಆ ಸಮಯದಲ್ಲೂ ಸಹ ಮಾನ್ಯ ರೆಡ್ಡಿಯವರ ಬಗ್ಗೆ ಆಗಲಿ ಮಾನ್ಯ ಮಾಧುಸ್ವಾಮಿಯವರ ಬಗ್ಗೆ ಆಗಲಿ ಅವರ ಹೆಸರನ್ನು ತೆಗೆದುಕೊಂಡು ನಾನೇನೂ ಟೀಕೆ ಟಿಪ್ಪಣಿ ಮಾಡಲಿಲ್ಲ. ನಾನು ಇಷ್ಟೇ ಹೇಳಿದೆ, ಇದೇ ಸದನದಲ್ಲಿ ನಮ್ಮ ನಾಯಕರು ಮುಖ್ಯಮಂತ್ರಿಯಾಗಿದ್ದಾಗ ಈ ಸದನದಲ್ಲಿ ಚರ್ಚೆ ನಡೆಯಿತು. ನಾನು ಆ ಸಮಯದಲ್ಲಿ ಶಾಸಕನಾಗಿದ್ದೆ. ಮಾನ್ಯ ಗೌರವಾನ್ವಿತ ಪ್ರಕಾಶ್‌ರವರು, ಮಾನ್ಯ ಸಿಂಧ್ಯಾರವರು, ಮಾನ್ಯ ಧರ್ಮಸಿಂಗ್‌ಜೀಯವರು, ಮಾನ್ಯ ರೇವಣ್ಣಜಿಯವರು ಉತ್ತರ ಕೊಟ್ಟಿದ್ದಾರೆ. ನೀವು ಏನೇನು ವಿಷಯ ರೈಸ್ ಮಾಡಿದಿರಿ ಅದಕ್ಕೆ ಸರ್ಕಾರ ಉತ್ತರ ಕೊಟ್ಟಿದೆ. ಆಗ ನಾನು ಸರ್ಕಾರದಲ್ಲಿ ಮಂತ್ರಿ ಇದ್ದಿಲ್ಲ. ಅವರೇ ರೈಸ್ ಮಾಡಿ ಸ್ಪಷ್ಟವಾಗಿ ಇರುವ ಪರಿಸ್ಥಿತಿಯನ್ನು ನಿಮಗೆ ಹೇಳಿದ್ದಾರೆ. ಅದರ ನಂತರವೂ ಸಹ ನಾನು ಹೇಳಿದೆ, ಇವತ್ತು ಮಾನ್ಯ ರೆಡ್ಡಿಯವರು ಮಾತನಾಡುವಾಗ ನೈಸ್ ಕಂಪನಿಯವರು ಪೊಲಿಟೀಷಿಯನ್ಸ್‌ಗೆ ಯಾವ ರೀತಿ ಆಪಾದನೆ ಮಾಡುತ್ತಿದ್ದಾರೆ ಅದು ಸರಿಯಲ್ಲವೆಂದು ತಾವು ಹೇಳುತ್ತಿದ್ದೀರಿ ನಾನು ಕೇಳುತ್ತಿದ್ದೆ. ತಾವು ಹೇಳಿದ್ದು ಸರಿಯೆಂದು ಹೇಳಿದೆ. ನಾನು ತಪ್ಪು ಅಂತ ಹೇಳಲಿಲ್ಲ. ಆದರೆ ನಾನು ಇವರೇ ದೊಡ್ಡ ಕಳ್ಳರು, ಇವರು ತಪ್ಪು ಮಾಡಿದ್ದಾರೆ ಅಂತ ನಾನೇನೂ ಹೇಳಲಿಲ್ಲ. ನಾನು ಇಷ್ಟೇ ಹೇಳಿದ್ದು ಸುಪ್ರೀಂ ಕೋರ್ಟ್‌ನವರು, ಹೈಕೋರ್ಟ್‌ನವರು ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ, ಈಗ ಡಿಬೇಟ್ ಇನ್ ಡಿಟೇಲ್ ಹೋಗುವುದು ಯಾವಾಗ; ಯಾವಾಗ ಡಿಬೇಟ್ ಆಗುತ್ತದೆ ಆಗ ಹೈಕೋರ್ಟ್ ಜಡ್ಜ್‌ಮೆಂಟ್ ಇರುತ್ತದೆ, ಸುಪ್ರೀಂ ಕೋರ್ಟ್ ಜಡ್ಜ್ ಮೆಂಟ್ ಇರುತ್ತದೆ ಕೆ.ಸಿ.ರೆಡ್ಡಿ ರಿಪೋರ್ಟ್ ಬಗ್ಗೆ ಸುಪ್ರೀಂ ಕೋರ್ಟ್‌ನವರು ಏನು ಹೇಳಿದ್ದಾರೆ. ಕೆ.ಸಿ.ರೆಡ್ಡಿ ಕಮಿಟಿ ಬಗ್ಗೆ ಏನು ಹೇಳಿದ್ದಾರೆ ಅದೆಲ್ಲಾ ಬರುತ್ತದೆ. ಅರೇ ನಾನು ಮಂತ್ರಿಯಾಗಿ ಆರ್ಡರ್ ಮಾಡಿದ್ದೇನೆ. ಫ್ರೇಮ್ ವರ್ಕ್ ಅಗ್ರಿಮೆಂಟ್ ಮೇಲೆ ಒಂದು ಇಂಚ್ ಲ್ಯಾಂಡ್ ಕೊಡಬಾರದು ಅಂತ. ಅದೇ ಮಾನ್ಯ ದೇವೇಗೌಡರು ಮೊನ್ನೆ ಉದಯ ನ್ಯೂಸ್‌ನಲ್ಲಿ ಹೇಳಿದ್ದಾರೆ. ನೋಡಿ ಆರ್.ವಿ.ದೇಶಪಾಂಡೆಯವರು ಅವರೇ ಆರ್ಡರ್ ಮಾಡಿದ್ದಾರೆಂದು ಅವರೇ ದಾಖಲೆಗಳನ್ನು ತೋರಿಸಿದ್ದಾರೆ. ಹಾಗಾಗಿ ನಾನು ಹೇಳಿದೆ, ಯಾವ ಜನರಿಗೆ ನನ್ನ ಬಗ್ಗೆ ತಪ್ಪು ತಿಳುವಳಿಕೆಯಾಗಿತ್ತು ಇವತ್ತು ಅವರು ಸರಿಯಾಗಿ ತಿಳಿದುಕೊಂಡು ಹೇಳುತ್ತಿದ್ದಾರೆಂದು ನಾನು ಇಷ್ಟೇ ಹೇಳಿದ್ದು ಈಗ ಮಾನ್ಯ ಮಾಧುಸ್ವಾಮಿಯವರು ಹೇಳಿದಾಗ ಅವರು ಅದು ಫೈನ್ ಅಂತ ತಿಳಿದು ಕೊಳ್ಳುತ್ತಾರೋ ಕಾಸ್ಟ್ ಅಂತ ತಿಳಿದುಕೊಳ್ಳುತ್ತಾರೋ ಅದು ನನಗೆ ಗೊತ್ತಿಲ್ಲ. ಆಗ ನಾನು ಜನರನ್ನು ಬಿಡುತ್ತೇನೆ. ಒಂದು ಸಿವಿಲ್ ಸೂಟ್

ಹಾಕಿದಾಗ ಡಿಕ್ರಿ ಆದಾಗ ಕಾಸ್ಟ್ ಅಂತ ಕೊಡುತ್ತಾರೆ. 5 ಸಾವಿರ ದಾವೆ ಇದ್ದರೆ 10 ಪರ್ಸೆಂಟ್ ಕಾಸ್ಟ್ ಅಂತ ಕೊಡುತ್ತಾರೆ. ಆ ಕಾಸ್ಟ್ ಡಿಫರೆಂಟ್. ಒಂದು ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಶನ್‌ನಲ್ಲಿ ಹಾಕಿದ ಕಾಸ್ಟ್ ಡಿಫರೆಂಟ್. ಹೈಕೋರ್ಟ್ ಜಡ್ಜ್‌ಮೆಂಟ್ ಆಯಿತು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆಯಿತು. ನಾನು ಒಂದು ಮಾತು ಏನಾದರೂ ಹೇಳಿದ್ದೇನೆಯೇ? ನಾವು ಏನು ಟೀಕೆ ಟಿಪ್ಪಣಿ ಮಾಡಿದ್ದೇವೆಯೇ? ಎಲ್ಲಾದರೂ ಪತ್ರಿಕೆಯಲ್ಲಿ ಹೇಳಿದ್ದೇನೆಯೇ? ಹೇಳಿ ನೋಡೋಣ ಮಾನ್ಯ ಮಾಧುಸ್ವಾಮಿಯವರು ಒಂದು ಮಾತು ಹೇಳಿದರು ನಾನೇನೂ ಮಾನ್ಯ ದೇಶಪಾಂಡೆಯವರು ವಿರುದ್ಧ ಮಾಡಬೇಕೆಂದೇನೂ ಇಲ್ಲ. ಆಗ ಕನ್‌ಸರ್ನ್ಡ್ ಯಾರು ಇದ್ದರು ಅವರ ಮೇಲೆ ಕೇಸ್ ಹಾಕಿದ್ದೇನೆಂದು. ಸಾರ್, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ; ತಾವು ಎಲ್ಲಾ ಕನ್‌ಸರ್ನ್ಡ್ ಇದ್ದವರ ಮೇಲೆ ಹಾಕಿಲ್ಲ. ಇದು ಪ್ರಾಜೆಕ್ಟ್ ಶುರು ಆಗಿದ್ದು 1995ರಲ್ಲಿ. 1995 ರಿಂದ 2004, 10 ವರ್ಷದಲ್ಲಿ ಬಹಳ ಜನ ಮುಖ್ಯಮಂತ್ರಿಗಳು ಅದರು. ಬಹಳ ಜನ ಲೋಕೋಪಯೋಗಿ ಮಂತ್ರಿಗಳಾದರು ಆಗ ನಾನು ಜನರನ್ನು ಬಿಡುತ್ತೇನೆ. ಒಂದು ಸಿವಿಲ್ ಸೂಟ್ ಹಾಕಿದಾಗ ಡಿಕ್ರಿ ಆದಾಗ ಕಾಸ್ಟ್ ಅಂತ ಕೊಡುತ್ತಾರೆ. 5 ಸಾವಿರ ದಾವೆ ಇದ್ದರೆ 10 ಪರ್ಸೆಂಟ್ ಕಾಸ್ಟ್ ಅಂತ ಕೊಡುತ್ತಾರೆ. ಆ ಕಾಸ್ಟ್ ಡಿಫರೆಂಟ್. ಒಂದು ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಶನ್‌ನಲ್ಲಿ ಹಾಕಿದ ಕಾಸ್ಟ್ ಡಿಫರೆಂಟ್. ಹೈಕೋರ್ಟ್ ಜಡ್ಜ್‌ಮೆಂಟ್ ಆಯಿತು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆಯಿತು. ನಾನು ಒಂದು ಮಾತು ಏನಾದರೂ ಹೇಳಿದ್ದೇನೆಯೇ? ನಾವು ಏನು ಟೀಕೆ ಟಿಪ್ಪಣಿ ಮಾಡಿದ್ದೇವೆಯೇ? ಎಲ್ಲಾದರೂ ಪತ್ರಿಕೆಯಲ್ಲಿ ಹೇಳಿದ್ದೇನೆಯೇ? ಹೇಳಿ ನೋಡೋಣ ಮಾನ್ಯ ಮಾಧುಸ್ವಾಮಿಯವರು ಒಂದು ಮಾತು ಹೇಳಿದರು ನಾನೇನು ಮಾನ್ಯ ದೇಶಪಾಂಡೆಯವರು ವಿರುದ್ಧ ಮಾಡಬೇಕೆಂದೇನೂ ಇಲ್ಲ. ಆಗ ಕನ್‌ಸರ್ನ್ಡ್ ಯಾರು ಇದ್ದರು ಅವರ ಮೇಲೆ ಕೇಸ್ ಹಾಕಿದ್ದೇನೆಂದು. ಸಾರ್, ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ; ತಾವು ಎಲ್ಲಾ ಕನ್‌ಸರ್ನ್ಡ್ ಇದ್ದವರ ಮೇಲೆ ಹಾಕಿಲ್ಲ. ಇದು ಪ್ರಾಜೆಕ್ಟ್ ಶುರು ಆಗಿದ್ದು 1995ರಲ್ಲಿ 1995 ರಿಂದ 2004, 10 ವರ್ಷದಲ್ಲಿ ಬಹಳ ಜನ ಮುಖ್ಯಮಂತ್ರಿಗಳು ಆದರು. ಬಹಳ ಜನ ಲೋಕೋಪಯೋಗಿ ಮಂತ್ರಿಗಳಾದರು ಬಹಳ ಜನ ಕೈಗಾರಿಕಾ ಮಂತ್ರಿಗಳಾದರು ಬಹಳ ಜನ ರೆವಿನ್ಯೂ ಮಂತ್ರಿಗಳಾದರು ಎಲ್ಲರನ್ನೂ ಪಾರ್ಟಿ ಮಾಡಲಿಲ್ಲ. ನೀವು ಹೇಳಿದಿರಿ ಎಲ್ಲರೂ ಪಾರ್ಟಿ ಇದ್ದಾರೆ ಅಂತ. ಮಾನ್ಯ ಸಿಂಧ್ಯಾ ಸಾಹೇಬರು ಪಾರ್ಟಿ ಇಲ್ಲ. ಮಾನ್ಯ ಪ್ರಕಾಶ್ ಸಾಹೇಬರು ಪಾರ್ಟಿ ಇಲ್ಲ. ಮಾನ್ಯ ಧರ್ಮಸಿಂಗ್‌ರವರು ಪಾರ್ಟಿ ಇಲ್ಲ

ಮಾನ್ಯ ಬಿ.ಎಲ್. ಶಂಕರ್‌ರವರು ಪಾರ್ಟಿ ಇಲ್ಲ. ದಯಮಾಡಿ ತಾವು ರೆಕಾರ್ಡ್ಸ್ ತೆಗೆಸಿ ನೋಡಿ. ಸೆಲೆಕ್ಟೀವ್ ಆಗಿ ಪಾರ್ಟಿ ಮಾಡಿದ್ದಾರೆ. ಮಾಡಿ ನಿಮಗೆ ಅಧಿಕಾರ ಇದೆ. ಒಬ್ಬ ಪಿಟಿಷನರ್ ಕೋರ್ಟ್‌ಗೆ ಹೋದ ನಂತರ ಯಾರನ್ನು ಪಾರ್ಟಿ ಮಾಡಬೇಕು ಏನು ಮಾಡಬೇಕು ಎಂದು ತಮ್ಮ ತಿಳಿವಳಿಕೆ ಪ್ರಕಾರ ತಾವು ಮಾಡುತ್ತೀರಿ ಆ ಬಗ್ಗೆ ನನ್ನ ವಾದ ವಿವಾದ ಏನೂ ಇಲ್ಲ; ಹಾಗಾಗಿ ಇವತ್ತು ನಾವು ನಿಮ್ಮ ಮೇಲೆ ನೀವು ನಮ್ಮ ಮೇಲೆ ಮಡಿಸಲಿಕ್ಕೆ ಮಾಡುವುದಕ್ಕೆ ಹೋದರೆ ನಾವು ಎಲ್ಲಿ ಹೋಗಿ ಮುಟ್ಟುತ್ತೇವೆ. ನಾನು ಈ ಸದನದಲ್ಲಿ ಹಿರಿಯವನು. ನಾನು ಸುಮಾರು 24–25 ವರ್ಷ ಸದನದಲ್ಲಿ ಕೆಲಸ ಮಾಡುತ್ತಿದ್ದೇನೆ. ಆದರೆ ನಾನು ಈ ಪ್ರಕಾರವಾಗಿ ಎಲ್ಲೂ ಹೇಳಿಲ್ಲ. ಆ ತರಹ ನಿಮ್ಮ ಕಡೆ ರೆಕಾರ್ಡ್ಸ್ ಇದ್ದರೆ ದಯಮಾಡಿ ಕೊಡಿ. ನಾನು ಬೇಡ ಎಂದು ಹೇಳುವುದಿಲ್ಲ. ನಾವು ಏನಾದರೂ ಕರೆಸಿ ಹೇಳಿದ್ದೇವೆಯೇ? ನಮ್ಮ ಮೇಲೆ ಕೇಸ್ ಹಾಕಬೇಡ್ರಿಯಪ್ಪ ಎಂದು ನಾವು ಯಾರಾನ್ನಾದರೂ ಕರೆಸಿ ಹೇಳಿದ್ದೇವೆಯೇ? ಅಥವಾ ಹೈಕೋರ್ಟ್‌ನಲ್ಲಿ, ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಹಾಕುವಾಗ ನಮ್ಮನ್ನು ಪ್ರೆಸ್ ಮಾಡಬೇಡಿ ಅಂತ ಏನಾದರೂ ನಾವು ಹೇಳಿದ್ದೇವೆಯೇ? ಫೈಟ್ ಆಗಿದೆ ನಾವೂ ಲಾಯರ್ಸ್ ಎಂಗೇಜ್ ಮಾಡಿದ್ದೇವೆ ನಮ್ಮ ಪಿಟಿಷನ್ ನಾವು ಹಾಕಿದ್ದೇವೆ. ಸುಪ್ರೀಂ ಕೋರ್ಟ್ ಹೈಕೋರ್ಟ್ ಆ ಬಗ್ಗೆ ನಿರ್ಣಯ ಕೊಟ್ಟಿದ್ದಾರೆ. ಹಾಗಾಗಿ ಇವತ್ತು ನಾವು ಒಂದು ಹಂತದಲ್ಲಿ ಮಾತನಾಡಬೇಕೇ ವಿನಹ ಒಂದು ಹಂತ ಬಿಟ್ಟು ನಾವು ಮಾತನಾಡುವುದಕ್ಕೆ ಹೋದರೆ ಅದು ತಪ್ಪಾಗುತ್ತದೆ ಅಂತ ನಾನು ಭಾವಿಸುತ್ತೇನೆ. ನಮಗೂ ಬ್ಯಾಕ್‌ಗ್ರೌಂಡ್ ಇದೆ, ನಮಗೂ ಕ್ಷೇತ್ರ ಇದೆ ನಮ್ಮ ಕ್ಷೇತ್ರದಲ್ಲಿ ನಿಮ್ಮಂತೆ ನಮಗೂ ಮತ ಹಾಕಿದ್ದಾರೆ. ಒಂದು ಬಾರಿ ಅಲ್ಲ 6 ಬಾರಿ ಹಾಕಿದ್ದಾರೆ. ಹಾಗಾಗಿ ಪ್ರತಿಯೊಬ್ಬರಿಗೂ ಗೌರವ ಇದೆ. ನಾನೇ ಸತ್ಯ ಹರಿಶ್ಚಂದ್ರ ಬೇರೆಯವರೆಲ್ಲಾ ಕಳ್ಳರು ಅಂತ ಹೇಳುವುದಕ್ಕೆ ಆಗುತ್ತದೆಯೇ? ನಾನು ಹೇಳಬಹುದು, ಆದರೂ ಮೇಲೆ ದೇವರು ಅಂತ ಒಬ್ಬರು ಇದ್ದಾರೆ. ಆ ಮನೆಯಲ್ಲಿ ಅಲ್ಲಿಯೇ ನಾವು ಪ್ರೂವ್ ಮಾಡಬೇಕಾಗುತ್ತದೆ. ನಾನು ಏನು ಅಂತ. ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ ಹಾಗೆ ರಾಜಕಾರಣ ಯಾವ ಮಟ್ಟದಿಂದ ಯಾವ ಮಟ್ಟಕ್ಕೆ ಹೋಗಿದೆ ಅದರ ಬಗ್ಗೆ ನಾನು ಇವತ್ತು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆ ಮಟ್ಟಕ್ಕೆ ನಾನು ಹೋಗುವುದಿಲ್ಲ ಆದರೆ ನಾವು ನಮ್ಮ ಕಾನ್‌ಶನ್ಸ್ ನೋಡಬೇಕು. ನಾನು ಏನು ಮಾಡುತ್ತೇನೆ ಅಂತ. ನಾವು ನೋಡಬೇಕಲ್ಲಾ ನಮ್ಮ ಕಾನ್‌ಶನ್ಸ್ ನಾನು ಮಾನ್ಯ ರಮೇಶ್‌ಕುಮಾರ್‌ರವರು

2.00 ಪಿಎಂ

ಇಂತಹವರು ಅಂತ ಹೇಳಿದಾಗ ನಾನು ಏನು ಮಾಡುತ್ತಿದ್ದೇನೆ ಅಂತ ನೋಡಬೇಕಲ್ಲಾ. ಒಂದು ವೇಳೆ ನಾನು ಮಾನ್ಯ ಪ್ರಕಾಶ್‌ರವರಿಗೆ, ನೀವು ತಪ್ಪು ಮಾಡಿದ್ದೀರಿ ಎಂದು ಕೈ ತೋರಿಸಿ ಹೇಳಿದರೆ, ನಾಲ್ಕು ಬೆರಳು ನನ್ನ ಕಡೆಯೇ ಇರುತ್ತದೆಯಲ್ಲವೇ? ನಾನೇನು ಇದ್ದೇನೆ ಎಂದು ನಾನೂ ಕೂಡ ವಿಚಾರ ಮಾಡಬೇಕಲ್ಲವೇ? ಆ ವಿಚಾರ ಮಾಡಲಿಲ್ಲವೆಂದರೆ ಹೇಗೆ? ಮಾನ್ಯ ಪ್ರಕಾಶ್‌ರವರೆ, ಮಾನ್ಯ ಶ್ರೀರಾಮರೆಡ್ಡಿಯವರು preliminary submission ಮಾಡಬೇಕು, ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕು ಎಂದು ನಾನು ಹೇಳಲಿಲ್ಲವೇ? ಇದರ ಬಗ್ಗೆ ಚರ್ಚೆ ಮಾಡಿ, discussion ಮಾಡಿ ಎಂದೇ ನಾನು ಹೇಳಿದೆ. ನಾನು ನಿಮಗೆ ಅಡ್ಡ ಬಂದಿಲ್ಲ. ನಾನು ನಿಮಗೆ ಅಡ್ಡ ಬಂದಿದ್ದರೆ ಹೇಳಿ? ನಿಮಗೆ ನಾನು ಅಡ್ಡ ಬಂದಿದ್ದರೆ, ನೀವು ನನಗೆ ಅಡ್ಡ ಬಂದಿರಿ ಎಂದು ನೀವು ಬೇಕಾದರೆ ಹೇಳಿ. ನಾನು ಚರ್ಚೆಯಾಗಬೇಕು, discussion ಆಗಬೇಕು ಎಂದೇ ಹೇಳಿದೆ. ನಾಡಿನ ಜನರಿಗೆ, ರಾಜ್ಯದ ಜನರಿಗೆ, ರಾಷ್ಟ್ರದ ಜನರಿಗೆ ಈ project ಸರಿ ಇದೆಯೋ, ತಪ್ಪು ಇದೆಯೋ ಎಂಬುದು ಗೊತ್ತಾಗಬೇಕು. ಇಲ್ಲಿ ಏನೇನು ತಪ್ಪಾಗಿದೆ? ಏನೇನು ಸರಿಯಾಗಿದೆ ಎಂಬುದನ್ನೆಲ್ಲಾ ಹೇಳಿ. ಅದಕ್ಕೆ ನಾನೇನೂ ಅಡ್ಡ ಬಂದಿಲ್ಲ. ಇದರ ಬಗ್ಗೆ ಚರ್ಚೆ ಮಾಡಿ ಎಂದು ನಾನೇ ಹೇಳಿದೆ. ನೀವು ನನಗೆ ಹೀಗೆ ಅಂದಿರಿ, ಹಾಗೆ ಅಂದಿರಿ ಎಂದು ಹೇಳಬಹುದು. ನಾನೂ ಕೂಡ ಆಪಾದನೆ ಮಾಡಿ ಹೋಗಬಹುದು. ಆದರೆ ಅದರಿಂದ ಏನು ಲಾಭ ಸಿಗುತ್ತದೆ ಹೇಳಿ? ಅನಾವಶ್ಯಕವಾಗಿ ಮಾತನಾಡದೆ, ಜವಾಬ್ದಾರಿಯಿಂದ ನಾವು ಮಾತನಾಡಿದರೆ ಅದಕ್ಕೆ ಹೆಚ್ಚಿನ ಗೌರವ ಬರುತ್ತದೆಂದು ನಾನು ಭಾವಿಸುತ್ತೇನೆ. ಇಲ್ಲಿ ಕುಳಿತು, ನನಗೆ ಮಾತನಾಡುವ ಅಧಿಕಾರ ಇದೆ ಎಂದು ನಾನು ನನ್ನ tongue ಮೇಲೆ ಹಿಡಿತ ಇಲ್ಲದೆ ಮಾತನಾಡಿದರೆ ಅದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ. ಮಾನ್ಯ ಮಾಧುಸ್ವಾಮಿಯವರು ಹಿರಿಯ ಸದಸ್ಯರಾಗಿದ್ದಾರೆ ಮತ್ತು ಅನುಭವಿಗಳೂ ಸಹ ಆಗಿದ್ದಾರೆ. ಅವರೂ ಸಹ ನಮ್ಮ ಜೊತೆಗೆ ಕೆಲಸ ಮಾಡಿದ್ದಾರೆ. ವಿರೋಧ ಪಕ್ಷದಲ್ಲಿದ್ದಾಗ ಅವರು ನಮ್ಮ ಜೊತೆಗೆ ಕೆಲಸ ಮಾಡಿದ್ದಾರೆ. ಅವರು ಒಳ್ಳೆಯ ಸ್ನೇಹಿತರಾಗಿ ಕೆಲಸ ಮಾಡಿದ್ದಾರೆ. ಅವರು ನಮ್ಮ ಜೊತೆಗೆ ಕೆಲಸ ಮಾಡುವಾಗ ಆ ಮಾತನ್ನು ಅವರು ಹೇಳಲಿಲ್ಲವಲ್ಲಾ? ಇವತ್ತು ನಾನು ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್‌ಗೆ ಹೋದಾಗ ಬಹಳಷ್ಟು ಬದಲಾವಣೆಗಳಾಗಿವೆ. ಮಾನ್ಯ ಉದಾಸಿಯವರು PWD Minister ಆಗಿದ್ದರು. ಅವರೂ ನೈಸ್ ಕಂಪೆನಿ ಡೀಲ್

ಮಾಡಿದ್ದರು. ಅವರು High power committee ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಆದರೆ ಅವರನ್ನು ಪಾರ್ಟಿ ಮಾಡಿಲ್ಲ. ಅನಾವಶ್ಯಕವಾಗಿ ಯಾರು ಯಾವ ಪಾರ್ಟಿಯಲ್ಲಿದ್ದರು? ಯಾರನ್ನು ಅವರು ಪಾರ್ಟಿಯಾಗಿ ಮಾಡಿದರು? ಯಾರು ಅವರಿಗೆ ಹೇಳಿ ಮಾಡಿಸಿದರು? ಆ ಚರ್ಚೆಗೆ ನಾವು ಹೋಗುವುದು ಬೇಡ. ನಾನು ಇಷ್ಟೇ ಹೇಳುತ್ತೇನೆ, ಈ ತರಹದ ಭಾಷೆಯಿಂದ ಅನಾವಶ್ಯಕವಾಗಿ tension, ಮನಸಾಪ್ತಗಳು ಬೆಳೆದು ಪರಸ್ಪರ ಪ್ರೀತಿ, ವಿಶ್ವಾಸಗಳು ಕಡಿಮೆಯಾಗುತ್ತದೆ. ಇಲ್ಲಿ ನಾವೆಲ್ಲರೂ ಕುಳಿತು ನಮ್ಮ ನಮ್ಮ standard ಮತ್ತು level ಇಟ್ಟುಕೊಂಡು ಮಾತನಾಡಿದರೆ ನಮಗೂ ಪರಸ್ಪರ ಗೌರವ ಬರುತ್ತದೆ, ಜನ ಏನು ನಮ್ಮನ್ನು ನೋಡುತ್ತಿದ್ದಾರೋ, ಅವರೂ ಸಹ ನಮಗೆ ಗೌರವದಿಂದ ನೋಡುತ್ತಾರೆ. ನಿಮ್ಮ ಮೇಲೆ ನಾನು ಹೇಳುವುದು, ನಮ್ಮ ಮೇಲೆ ನೀವು ಹೇಳುವುದು ಸರಿಯಲ್ಲ. ಅದು ಖರೆ ಇದೆಯೋ ಇಲ್ಲವೋ ಎಂದು ಹೇಗೆ ಹೇಳುವುದು? ಅದು ಖರೆ ಇದ್ದಲ್ಲಿ ಅದನ್ನು ಪ್ರೂವ್ ಮಾಡಬೇಕಾಗುತ್ತದೆ. ಆದರೆ ಅನಾವಶ್ಯಕವಾಗಿ ಹೇಳಿದರೆ ಪತ್ರಿಕೆಗಳ ಮುಖೇನ ಅದು ಜನರಿಗೆ ತಲುಪಿದರೆ ಜನ ನಮ್ಮ ಬಗ್ಗೆ ಏನು ಅಂದುಕೊಳ್ಳುತ್ತಾರೆ? ** ನಾನು ಇಷ್ಟನ್ನು ಮಾತ್ರ ಈ ಸದನದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್(ಮಾನ್ಯಸಚಿವರು) : ಮಾನ್ಯ ಅಧ್ಯಕ್ಷರೆ, ನಿಜ ವಾಗಿಯೂ ಕೂಡ ನಮ್ಮ ಈ ಸದನದ ಘನತೆಯನ್ನು ನಮ್ಮ ಎಲ್ಲಾ ಸದಸ್ಯರೂ ಕೂಡ ಎತ್ತಿ ಹಿಡಿದಿದ್ದಾರೆ. ಒಂದು ವಿಷ ಗಳಿಗೆಯಲ್ಲಿ ಉದ್ರೇಕಕಾರಿ ಯಾಗಿರುವಂತಹ ಕೆಲವು ಮಾತುಗಳನ್ನು ಬಳಸಿದ್ದರೂ, ಮಾನ್ಯ ಮಾಧುಸ್ವಾಮಿ ಯವರಾಗಲೀ ಅಥವಾ ಮಾನ್ಯ ದೇಶಪಾಂಡೆಯವರಾಗಲೀ ವೈಯಕ್ತಿಕವಾಗಿ ನೋವಾಗುವಂತಹ ಶಬ್ದಗಳನ್ನು ಏನಾದರೂ ಬಳಸಿದ್ದರೆ, ಅದಕ್ಕೆ ನಾವೆಲ್ಲರೂ ಕೂಡ ವಿಷಾದ ಪಡುತ್ತೇವೆ. ಮತ್ತು ಇದು ಸರಿಯಾದುದಲ್ಲ ಎಂದೂ ಕೂಡ ಹೇಳುತ್ತೇವೆ. ಮಾನ್ಯ ರಮೇಶ್‌ಕುಮಾರ್‌ರವರಾಗಲೀ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಾಗಲೀ ಮತ್ತು ಹಿರಿಯರಾದ ಮಾನ್ಯ ವಿರೋಧ ಪಕ್ಷದ ನಾಯಕರಾಗಲಿ, ಒಂದು ತಪ್ಪಾಯಿತು ಅಥವಾ ವಿಷಾದ ಅಥವಾ ಇದಕ್ಕೆ ಕ್ಷಮೆ ಕೇಳಿದರೆ, ಇದನ್ನು ಮುಕ್ತಾಯಗೊಳಿಸೋಣ ಎನ್ನುವಂತಹ ಒಂದು ಒಳ್ಳೆಯ ಮಾತನ್ನು ಹೇಳಿದ್ದರಿಂದ, ಮಾನ್ಯ ಮಾಧುಸ್ವಾಮಿಯವರು ಅದಕ್ಕೆ ಸರಿಯಾದಂತಹ ರೀತಿಯಲ್ಲಿ ಪ್ರತಿಸ್ಪಂದನೆ ಮಾಡಿದ್ದಾರೆ. ನಾನು ಯಾರಿಗೂ

** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಹೇಳಬೇಕು ಅನ್ನತಕ್ಕಂಥ ಉದ್ದೇಶ ಇರಲಿಲ್ಲ, ಅದೇನೋ ಮಾತಿನ ಮೇಲೆ ಅಕಸ್ಮಾತ್ ಹೇಳಿದ್ದರೆ, ಅದನ್ನು ನಾನು ತಪ್ಪು ಎಂದು ಒಪ್ಪಿಕೊಳ್ಳುತ್ತೇನೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆಸಲಿಕ್ಕೆ ತಾವು ಅಪ್ಪಣೆ ಕೊಡಿ. ಹಿಂದೆ ಅಂತಹದ್ದು ಏನಾದರೂ ಇದ್ದರೂ ಕೂಡ ತಾವು ತಮ್ಮ ಕೊಠಡಿಯಲ್ಲಿ ಕುಳಿತು, ಇದಕ್ಕೆ ಸಂಬಂಧವಿಲ್ಲದಿರುವಂತಹ ವಿಷಯಗಳು ಇದ್ದರೂ ಕೂಡ, ಅದನ್ನೂ ಕೂಡ ಕಡತದಿಂದ ತೆಗೆಸಿರಿ. ಬೇರೆ ಬೇರೆ ಸದನಗಳ ಕಲಾಪಗಳನ್ನು ನೋಡಿದಾಗ, ನಮ್ಮಲ್ಲಿರುವ ಎಲ್ಲಾ ಹಿರಿಯ ಸದಸ್ಯರು ಒಳ್ಳೆಯ ಮಾರ್ಗದರ್ಶನ ಮಾಡಿದ್ದಾರೆ. ನಮ್ಮ ಸದನದಲ್ಲಿ ಇರತಕ್ಕಂಥ ನಾವೆಲ್ಲರೂ ಕೂಡ ಬಹಳ ಗೌರವದಿಂದ ಮತ್ತು ಘನತೆಯಿಂದ ನಡೆದುಕೊಂಡಿದ್ದೇವೆ. ದಯಮಾಡಿ ಇದನ್ನು ಇಲ್ಲಿಗೇ ಮುಕ್ತಾಯಗೊಳಿಸಿ. ಮಾನ್ಯ ಶ್ರೀರಾಮರೆಡ್ಡಿ ಯವರು preliminary submission ಮಾಡಿ ತಮ್ಮ ಮನವೊಲಿಸತಕ್ಕಂಥ ಕೆಲಸ ಗಳನ್ನು ಮಾಡಲಿ. ಎಲ್ಲರೂ ಕೂಡ ಸಂಬಂಧವಿಲ್ಲದಿರುವವರೇ ಇಲ್ಲಿ ಕುಳಿತು ಕೊಂಡಿದ್ದೇವೆ. ಇದಕ್ಕೆ ಸಂಬಂಧವಿಲ್ಲದಿರ ತಕ್ಕವರೇ ಇಲ್ಲಿ ಎಲ್ಲರೂ ಇರುವುದ ರಿಂದ, ಆ ಬಗ್ಗೆ ವಸ್ತುಸ್ಥಿತಿ ವಿಚಾರದಲ್ಲಿ ಚರ್ಚೆಯಾಗಲಿ. ತಾವು ದಯವಿಟ್ಟು ಅಂತದ್ದು ಏನಾದರೂ ಇದ್ದರೆ ತಾವು ಛೇಂಬರ್‌ನಲ್ಲಿ ಕಡತ ತರಿಸಿ ತೆಗೆಸಿ ಹಾಕಿ.

ಅಧ್ಯಕ್ಷರು : ನಾನು ಛೇಂಬರ್ಸ್‌ನಲ್ಲಿ ನೋಡಿ ತೆಗೆಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಉಳಿದಂತೆ ತಾವು ಅವರಿಗೆ ಅವಕಾಶ ಕೊಡಬೇಕು. ನಾನು ಮಾನ್ಯ ವಿರೋಧ ಪಕ್ಷದ ನಾಯಕರನ್ನು, ಉಳಿದ ಹಿರಿಯರನ್ನು ಮತ್ತು ಮಾನ್ಯ ಮಾಧುಸ್ವಾಮಿಯವರನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು : ನಾನು ಎಲ್ಲವನ್ನೂ ನೋಡಿ unparliamentary ಏನೇನಿದೆಯೋ ಅದೆಲ್ಲವನ್ನೂ ಸಹ ತೆಗೆಸಿ ಹಾಕುತ್ತೇನೆ. ಈಗಾಗಲೇ culprit, ಕಳ್ಳರು ಎಂಬುದನ್ನೆಲ್ಲಾ ತೆಗೆಸಿ ಬಿಟ್ಟಿದ್ದೇನೆ. ಅದನ್ನು ಆಗಲೇ ತೆಗೆಯಿರಿ ಎಂದು ಹೇಳಿದ್ದೇನೆ. ಇನ್ನೇನಾದರೂ unparliamentary ಪದಗಳು ಇದ್ದರೆ ಅದನ್ನೆಲ್ಲಾ ತೆಗೆಸಿ ಹಾಕುತ್ತೇನೆ. ಮಾನ್ಯ ರೆಡ್ಡಿಯವರೇ, ಈಗಾಗಲೇ ಎರಡು ಗಂಟೆಯಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಒಂದು ನಿಮಿಷ ಮಾತನಾಡಬಯಸುತ್ತೇನೆ. ತಾವೇನು ತೀರ್ಮಾನ ಕೊಡುತ್ತೀರೋ ಅದನ್ನು ಕೊಡಿ. Preliminary submission ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ಮಾನ್ಯ ರಮೇಶ್‌ಕುಮಾರ್‌ರವರು ನನ್ನ ಬಗ್ಗೆ

ಹೇಳಿದರು. ಬೇರೆಯವರು ಹೇಳಿದ್ದರೆ ನನಗೇನೂ ನೋವಾಗುತ್ತಿರಲಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರು 25 ವರ್ಷಗಳಿಂದ ನನ್ನ ರಾಜಕೀಯ ಜೀವನವನ್ನು ನೋಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅದಕ್ಕೇ ನಾನು ಹೇಳಿದ್ದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನೇನು insimulation ಮಾಡತಕ್ಕಂಥ ರಾಜಕಾರಣಿಯೋ ಅಥವಾ ಎಂತಹ ರಾಜಕಾರಣಿ ಎಂದು ಅವರಿಗೆ ಗೊತ್ತಿದೆ. ಆ ಉದ್ದೇಶದಿಂದ ಖಂಡಿತ ನಾನು ಮಾಡಿಲ್ಲ. ಆ ಉದ್ದೇಶ ನನಗೆ ಎಂದಿಗೂ ಇಲ್ಲ. ಅವರವರ interpretation ಹಾಗಿದ್ದರೆ ನಾವೇನೂ ಮಾಡಲಿಕ್ಕಾಗುವುದಿಲ್ಲ.

Sri K.R. Rameshkumar: I immediately withdraw my remarks.

Sri G.V. SriRamaReddy: Thank you Sir. ಅವರಿಗೆ 25 ವರ್ಷಗಳಿಂದ ನನ್ನ ಬಗ್ಗೆ ಗೊತ್ತಿದೆ. ಅವರು ಆ ರೀತಿ ಮಾತನಾಡಿದರೆ ನಮಗೆ ನೋವಾಗುತ್ತದೆ. ಬೇರೆಯವರು ಮಾತನಾಡಿದರೆ ನೋವಾಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಅವರು I am withdrawing it ಎಂದು ಹೇಳಿದರಲ್ಲಾ. ಇದನ್ನು ಇಲ್ಲಿಗೇ ಬಿಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 25 ವರ್ಷಗಳಿಂದ ಇದ್ದರೂ ಕೂಡ, 18 ವರ್ಷಗಳ ಒಳಗೆ ಅವರು ಮಾಡಿದಂತಹ statement ಬೇರೆ, 18 ವರ್ಷ ಗಳಾದ ನಂತರ ಮಾಡಿದಂತಹ statement ಬೇರೆ!

ಶ್ರೀ ವಾಟಾಳ್ ನಾಗರಾಜ್ : ಇದು ಮಾನ್ಯ ಖರ್ಗೆಯವರು ಅನುಭವದಿಂದ ಹೇಳುತ್ತಿರುವಂತಹ ಮಾತಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಇದು ಅನುಭವದಿಂದ ಹೇಳತಕ್ಕಂಥ ಮಾತಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮೇಜರ್ ಆಗಿದ್ದಾಗ ಹೇಳಿದ್ದು ಬೇರೆ, ಇಲ್ಲದಿದ್ದರೆ ಅದು ಡೆಲಿಕ್ವೆನ್ಸಿ ಆಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಮತ್ತು ನೀವು ಕುಳಿತಿದ್ದಾಗಲೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು sarcastic ಆಗಿ ಏನು ಹೇಳಿದರು. ಒಂದ್ಸಲ ನಾನೂ ಮತ್ತು ಧರ್ಮಸಿಂಗ್‌ರವರು 35 ವರ್ಷಗಳಿಂದ ಸ್ನೇಹಿತರು, ನಮ್ಮ ಪರಿಸ್ಥಿತಿಯೇ ಈಗ ಹೀಗಾಗಿದೆ ಎಂದು ಹೇಳಿದರು. ಅದು ಅವರಿಗೆ ಜ್ಞಾಪಕ ಇರಬಹುದು. ಕೆಲವು ಸಂದರ್ಭದಲ್ಲಿ ಆ ರೀತಿ ಭಾವನೆ ಬರುವುದು

ತಪ್ಪು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ನಾನು preliminary submission ಮಾಡುತ್ತೇನೆ. ನಂತರ ಮಾನ್ಯ ಅಧ್ಯಕ್ಷರು ಸದನವನ್ನು adjourn ಮಾಡಬಹುದು.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸಭೆಯು ಮಧ್ಯಾಹ್ನ 2 ಗಂಟೆ 8 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನ ಮಧ್ಯಾಹ್ನ 3.45ಕ್ಕೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀಕೃಷ್ಣರವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ಸದನದಲ್ಲಿ ಸದಸ್ಯರ ಸಚಿವರುಗಳ ಗೈರು ಹಾಜರಿ ಬಗ್ಗೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೆ ಪ್ರಾರಂಭ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲಿ ಯಾರೂ ಇಲ್ಲ.

ಅಧ್ಯಕ್ಷರು : ಈಗ ನೋಡಿ ಇದ್ದಾರೋ ಇಲ್ಲವೋ, ಆಸಕ್ತಿ ಇದ್ದವರು ಇದ್ದಾರೆ ಈಗ ನಾನು ಹೇಳುವುದು ರೆಡ್ಡಿಯವರೆ, ಆಸಕ್ತಿ ಇದ್ದವರು ಇದ್ದಾರೆ ಆಸಕ್ತಿ ಇಲ್ಲದವರು ಬಂದಿಲ್ಲ. ಅದಕ್ಕೋಸ್ಕರ ಅದೇನೂ ಮಾಡುವುದಕ್ಕಾಗುವುದಿಲ್ಲ. ಮಾತನಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಆಸಕ್ತಿ ಇದ್ದವರು ಇದ್ದಾರೆ ಎಂದರೆ, ಸರ್ಕಾರಕ್ಕೆ ಆಸಕ್ತಿ ಇಲ್ಲವೆಂದ ಹಾಗಾಯಿತು. ಅವರು ಯಾರೂ ಇಲ್ಲ.

ಅಧ್ಯಕ್ಷರು : ನಾನು ಏನೂ ಹೇಳುವುದಕ್ಕಾಗುವುದಿಲ್ಲ. I don't want to comment. ಈಗ ನಾನು ಕಾಮೆಂಟ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆಸಕ್ತಿ ಇದ್ದವರು ಇದ್ದಾರೆ. ಆಸಕ್ತಿ ಇಲ್ಲದವರು ಬಂದಿಲ್ಲ. ಕೋರಂ ಇದೆ, ಮಾತನಾಡಿ ದಯಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕರೆಕ್ಟ್ ಮಾತನಾಡುತ್ತೇನೆ, ಆದರೆ ಜವಾಬ್ದಾರಿ ಇರತಕ್ಕಂಥವರು ಒಬ್ಬರೂ...